(ಸದನವನ್ನು ಮಧ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸದನವು ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಶೀಲ್ದಾರ್) ಪೀಠದಲ್ಲಿ ಉಪಸ್ಥಿತರಿದ್ದರು (ಸದನ ಪ್ರಾರಂಭವಾದಾಗ ಬಿ.ಜೆ.ಪಿ. ಪಕ್ಷದ ಸದಸ್ಯರೆಲ್ಲರೂ ಕೂಡ ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು)

6. ಪ್ರಕಟಣೆಗಳು

ವಿಧಾನ ಪರಿಷತ್ತಿನ ಮಾನ್ಯ ಸಭಾ ಪತಿಯವರಿಂದ ಬಂದ ಸಂದೇಶ.

ಉಪಾಧ್ಯಕ್ಷರು : ಈಗ ಪ್ರಕಟಣೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಪ್ರಕಟಣೆ – 1

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ದಿನ ಅಂದರೆ, ದಿನಾಂಕ 5ನೇ ಆಗಸ್ಟ್ 2003ರಂದು, ಕರ್ನಾಟಕ ಸರ್ಕಾರಿ ಉದ್ಯಾನವನಗಳ ಸಂರಕ್ಷಣೆ (ತಿದ್ದುಪಡಿ) ವಿಧೇಯಕ 2003ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಪ್ರಕಟಣೆ – 2

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 104ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ದಿನ ಅಂದರೆ, ದಿನಾಂಕ 5ನೇ ಆಗಸ್ಟ್ 2003ರಂದು, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ 2002ನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಪ್ರಕಟಣೆ – 3

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ದಿನ ಅಂದರೆ, ದಿನಾಂಕ 4ನೇ ಆಗಸ್ಟ್ 2003ರಂದು, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 2003ನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

7. ನಗರಾಭಿವೃದ್ಧಿ ಸಚಿವರ ಪದಬಳಕೆಯನ್ನು ವಿರೋಧಿಸಿ ಬಿ.ಜೆ.ಪಿ. ಸದಸ್ಯರಿಂದ ಧರಣಿ(ಬಿ.ಜೆ.ಪಿ.ಯ ಮಾನ್ಯ ಸದಸ್ಯರೆಲ್ಲರೂ ಧರಣಿ ನಿರತರಾಗಿದ್ದರು)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಬೆಳಿಗ್ಗೆ ಮಾನ್ಯ ಶಾಸಕ ಮಿತ್ರರಾದ ಶ್ರೀ ಅರಗ ಜ್ಞಾನೇಂದ್ರರವರು ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರು, ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಶಿವಕುಮಾರ್ ರವರು ಬಿಜೆಪಿ ಶಾಸಕರನ್ನು ಉದ್ದೇಶಿಸಿ, XXX ಎನ್ನುವಂಥ ಆರೋಪವನ್ನು ಏನು ಮಾಡಿದರು XXX ಎನ್ನುವಂಥ ಆರೋಪವನ್ನು ಏನು ಮಾಡಿದರು, ಅದರ ಬಗ್ಗೆ ಈಗಾಗಲೇ ಬೆಳಿಗ್ಗೆ ಸಾಕಷ್ಟು ಚರ್ಚೆಯಾಗಿದೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಇವತ್ತು ಸದನದ ನಿಯಮಾವಳಿಯ ಪ್ರಕಾರವೇ ಸದನದಲ್ಲಿದ್ದಂಥ ಸದಸ್ಯರ ಬಗ್ಗೆ ಇರಬಹುದು, ಮಂತ್ರಿಗಳ ಬಗ್ಗೆ ಇರಬಹುದು ಅಥವಾ ಯಾವುದೇ ವ್ಯಕ್ತಿಗಳ ಬಗ್ಗೆ ಏನಾದರೊಂದು ಆರೋಪ ಮಾಡಬೇಕಾದರೆ ಸಭಾಧ್ಯಕ್ಷರ ಕಡೆಗೆ ಒಂದು ಪೂರ್ವ ನೋಟಿಸ್‌ನ್ನು ಕೊಟ್ಟು ಆ ಆಪಾದನೆಯನ್ನು ಮಾಡಬೇಕಾಗುತ್ತದೆ ಮತ್ತು ಆ ಆಪಾದನೆ ಮಾಡುವಂಥ ಸಂದರ್ಭ ಏನಿತ್ತು, ಈಗಾಗಲೇ ಅದರ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದೇವೆ. ಇವತ್ತು ಶ್ರೀ ಅರಗ ಜ್ಞಾನೇಂದ್ರ ಅವರು ಯಾವ ಉದ್ದೇಶ ಇಟ್ಟುಕೊಂಡು ಆ ಮಾತುಗಳನ್ನು ಹೇಳಿದರು. ಈ ಹಿಂದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಹಲವಾರು ಯುದ್ಧಗಳು ನಡೆದಿವೆ. ಜಗತ್ತಿನಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪಾಕಿಸ್ತಾನ ಒಂದು ಭಯೋತ್ಪಾದಕ ರಾಷ್ಟ್ರ ಎನ್ನುವಂಥದ್ದು, ಈಗಾಗಲೇ ಭಯೋತ್ಪಾದಕ ರಾಷ್ಟ್ರಗಳಲ್ಲಿ ಅದು ಒಂದು ಏನ್ನುವಂಥದ್ದನ್ನು ಆ ಪಟ್ಟಿಯಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಕೊಡಲಾಗಿದೆ. ಕಾರ್ಗಿಲ್ ಯುದ್ಧ ಆಯಿತು, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧ ಆಯಿತು. ಆ ಒಂದು ಭಾವನೆಗಳು ಬೆಳೆದುಕೊಂಡಿವೆ. ಇವತ್ತು ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಮತ್ತು ನಾವು ಪಾಕಿಸ್ಥಾನದ ಜೊತೆಗೆ ಏಕೆ ಸ್ನೇಹ ಹಸ್ತವನ್ನು ಚಾಚುತ್ತಿದ್ದೇವೆ ಎಂದರೆ, ಅದು ಮಿತ್ರ ರಾಷ್ಟ್ರವಾಗಿದ್ದರೆ, ನಾವು ಸ್ನೇಹ ಹಸ್ತವನ್ನು ಚಾಚುವಂಥ ಪ್ರಸಂಗ ಬರುತ್ತಿರಲಿಲ್ಲ. ಲಾಹೋರ್ ಬಸ್ ಅನ್ನು ಸೌಹಾರ್ದ ಸಂಬಂಧ ಬೆಳೆಸುವ ಸಲುವಾಗಿ ಕಳುಹಿಸುವುದು. ಏಕೆಂದರೆ, ಅದರ ಜೊತೆಯಲ್ಲಿ ಮಿತ್ರತ್ವ ಮಾಡಿಕೊಳ್ಳುವ ಸಲುವಾಗಿಯೇ ನಾವು ಮಾಡುತ್ತಿದ್ದೇವೆ, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ನಮ್ಮ ರಾಷ್ಟ್ರದ XXX ಎಂದು ತಿಳಿದುಕೊಂಡೇ ಆ ಒಂದು ಸೌಹಾರ್ದ ಭಾವನೆ ಉಳಿಯಲಿ ಎಂದು ತಿಳಿದುಕೊಂಡು ಆ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಹಾಗಾಗಿ ಮಾನ್ಯ ಅರಗ ಜ್ಞಾನೇಂದ್ರರವರಯ ಪಾಕಿಸ್ತಾನವನ್ನು XXX ಎಂದು ಹೇಳಿ ಕರೆದಿದ್ದಕ್ಕೆ ಯಾವುದೇ ಒಂದು ಅಪಾರ್ಥವನ್ನು ಕಲ್ಪನೆ ಮಾಡುವಂಥದ್ದಲ್ಲ. ಇವತ್ತು XXX ಇದ್ದರು ಸಹಿತ ಆ XXX ಜೊತೆಗೆ ನಾವು ಸೌಹಾರ್ದ ಸಂಪರ್ಕವನ್ನಿಟ್ಟುಕೊಂಡು, ಸ್ನೇಹವನ್ನು ಸಂಪಾದಿಸಬೇಕು ಎನ್ನುವ ಉದ್ದೇಶವಿಟ್ಟುಕೊಂಡು ಈ ಎಲ್ಲಾ ಪ್ರಕ್ರಿಯೆಗಳು ನಡೆಯುತ್ತಿವೆ. ಹೀಗಾಗಿ ಆ ಉದ್ದೇಶ ಇಟ್ಟುಕೊಂಡು ಆ ಒಂದು ಹಿನ್ನೆಲೆಯಲ್ಲಿ, ಆ ಮಗುವಿನ ಬಗ್ಗೆ ಹೇಳಿದರು, ಪಾಕಿಸ್ತಾನದಿಂದ ಬಂದ ಮಗುವಿನ ಬಗ್ಗೆ ಮಾನ್ಯ ಅರಗ ಜ್ಞಾನೇಂದ್ರರವರು ಏನು ಉದ್ದೇಶಿಸಿ ಹೇಳಿದರು, ಆ ರೀತಿ ರಾಷ್ಟ್ರದ ಸಂಬಂಧಗಳು ಕೆಟ್ಟಂಥ ಸಂದರ್ಭದಲ್ಲಿ ಸಹಿತ ಪಾಕಿಸ್ತಾನದ ಜೊತೆಗೆ ಮಿತ್ರತ್ವವನ್ನು ಕಾಪಾಡಿಕೊಂಡು ಹೋಗಬೇಕು, ಸೌಹಾರ್ಥ ಭಾವನೆಗಳನ್ನು ಕಾಪಾಡಿಕೊಂಡು ಹೋಗುವ ಉದ್ದೇಶದಿಂದ ಪಾಕಿಸ್ತಾನದ ಮಗುವಿಗೆ ಇಲ್ಲಿ ಆಸ್ಪತೆಯಲ್ಲಿ ಚಿಕಿತ್ಸೆ ನಡೆಸುವಂಥ ಪ್ರಸಂಗದಲ್ಲಿ ಇಡೀ ಭಾರತ ದೇಶದಲ್ಲಿ, ಮಾಧ್ಯಮದವರು ಇರಬಹುದು, ಎಲ್ಲಾ ರಾಜಕೀಯ ಪಕ್ಷದವರು ಇರಬಹುದು, ನಮ್ಮ ರಾಜ್ಯ ಸರ್ಕಾರದ ಮಂತ್ರಿಗಳಿರಬಹುದು, ನಮ್ಮ ರಾಜ್ಯದ ಒಬ್ಬ ಮಂತ್ರಿಗಳು ಹೋಗಿ ಸೌಹಾರ್ದಯುತವಾದ ಸಂದೇಶ ಕೊಟ್ಟು ಬಂದರು. ಏಕೆ? ಆ ರಾಷ್ಟ್ರದ ಜೊತೆ ಒಳ್ಳೆಯ ಸಂಪರ್ಕವನ್ನು ಇಟ್ಟುಕೊಳ್ಳುವ ಉದ್ದೇಶ ಇಟ್ಟುಕೊಂಡಿದ್ದರು? ನಮ್ಮ ಮಿತ್ರ ರಾಷ್ಟ್ರದಿಂದ ಒಂದು ಮಗು ಬಂದಿದ್ದರೆ, ಇವೆಲ್ಲಾ ಪ್ರಕ್ರಿಯೆ ನಡೆಯಲಿಕ್ಕೆ ಸಾಧ್ಯವಿತ್ತೇ? ಇಲ್ಲ, ಹೀಗಾಗಿ ಮಾನ್ಯ ಅರಗ ಅಥವಾ ನಾವು ತಪ್ಪಾಗಿ ಅದನ್ನು ಅರ್ಥ ಮಾಡಿಕೊಳ್ಳುವಂಥದ್ದು ಏನೂ ಇಲ್ಲ. ಹೀಗಾಗಿ, ಆ ರೀತಿ

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಹೇಳಿದಂಥ ಸಂದರ್ಭದಲ್ಲಿ ಈ ಹಿನ್ನೆಲೆಯಲ್ಲಿ ಹೇಳಿರುವಂಥದ್ದನ್ನು ತಪ್ಪು ಅರ್ಥ ಮಾಡಿಕೊಂಡು ಇವತ್ತು ಮಾನ್ಯ ಶಿವಕುಮಾರ್ ರವರು, ಈ ಕಡೆ ಇದ್ದಂಥ ಭಾರತೀಯ ಜನತಾ ಪಾರ್ಟಿಯ ಎಲ್ಲಾ ಶಾಸಕರು ಕೇವಲ ಶ್ರೀ ಅರಗ ಜ್ಞಾನೇಂದ್ರ ಅವರು ಅಷ್ಟೇ ಅಲ್ಲ, ಎಲ್ಲಾ ಶಾಸಕರನ್ನು ಅವರೆಲ್ಲಾ XXX ಎನ್ನುವಂಥ ಒಂದು ಪದವನ್ನು ಏನು ಪ್ರಯೋಗ ಮಾಡಿದರು. ಹೀಗಾಗಿ ಆ ಪದದಿಂದ ನಮಗೆಲ್ಲಾ ಇವತ್ತು ನೋವು ಉಂಟಾಗಿದೆ, ನಮ್ಮ ಬಹಳಷ್ಟು ಎಲ್ಲಾ ಶಾಸಕರಿಗೂ ನೋವು ಉಂಟಾಗಿದೆ. ಇವತ್ತು ರಾಷ್ಟ್ರದ ಬಗ್ಗೆ ಅಭಿಮಾನ ಇಟ್ಟುಕೊಂಡಿರುವಂಥವರು, ರಾಷ್ಟ್ರ ಬೆಳೆಯಬೇಕು, ಈ ರಾಷ್ಟ್ರದ ಸಲುವಾಗಿ ನಾವು ಪ್ರತಿಯೊಬ್ಬರು ದುಡಿಯಲಿಕ್ಕೆ ತಯಾರು ಇದ್ದಂಥವರು, XXX ಕೆಲಸವನ್ನು ಮಾಡುವಂಥವರಿಗೆ ಶಿಕ್ಷೆ ಕೊಡಿ ಎಂದು ಹೇಳುವಂಥವರು ನಾವು ಭಾರತೀಯ ಜನತಾ ಪಾರ್ಟಿಯ ಶಾಸಕರು. ಇವತ್ತು ಭಾರತೀಯ ಜನತಾ ಪಾರ್ಟಿಯ ಶಾಸಕರ ಬಗ್ಗೆ ಈ ರೀತಿ ಒಂದು ಗುರುತರವಾದ ಆಪಾದನೆಯನ್ನು ಮಾಡಿದರೆ ಇದು ಯಾವ ಅರ್ಥ ಕೊಡುತ್ತದೆ? ಇವತ್ತು ಭಾರತೀಯ ಜನತಾ ಪಾರ್ಟಿಯ ಶಾಸಕರ ಬಗ್ಗೆ ಜನರಲ್ಲಿ ಯಾವ ಭಾವನೆಗಳು ಮೂಡಲಿಕ್ಕೆ ಸಾಧ್ಯ ಇದೆ ಎನ್ನುವಂಥದ್ದನ್ನು ಸನ್ಮಾನ್ಯ ಉಪಾಧ್ಯಕ್ಷರು ಪರಿಶೀಲನೆ ಮಾಡಬೇಕಾಗಿದೆ. ಇನ್ನೊಂದು ಹೇಳಬೇಕಾಗಿದೆ. ಇವತ್ತು ಭಾರತೀಯ ಜನತಾ ಪಾರ್ಟಿಯ ಶಾಸಕರ ಬಗ್ಗೆ ಈ XXX ಆಪಾದನೆ ಮಾಡುವುದರಿಂದ ಏನಾಗುತ್ತದೆ? ನಾವು ಇಲ್ಲಿ ಜನಪ್ರತಿನಿಧಿಗಳಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರಿಂದ ಚುನಾಯಿತರಾಗಿ ಇಲ್ಲಿಗೆ ಬಂದಿದ್ದೇವೆ. XXX ಕೆಲಸ ಮಾಡುತ್ತೇವೆಂದು ಹೇಳಿದರೆ ಇವತ್ತು ಚುನಾವಣೆಗೆ ನಿಲ್ಲುವುದಕ್ಕೆ ನಮಗೆ ಬರುವುದಿಲ್ಲ. ಇಲ್ಲಿ ಸದನದಲ್ಲಿ ಕುಳಿತು ಚರ್ಚಿಸಲಿಕ್ಕೆ ಆಗುವುದಿಲ್ಲ. ಈ ರೀತಿಯಾದ ಗುರುತರವಾದ ಆಪಾದನೆಯನ್ನು ಇವತ್ತು ಮಾನ್ಯ ಶಿವಕುಮಾರ್‌ರವರು ಮಾಡಿದ್ದು ನಮಗೆಲ್ಲಾ ಮನಸ್ಸಿಗೆ ಬಹಳ ನೋವು ಉಂಟಾಗಿದೆ. ಮಾನ್ಯ ಚಂದ್ರೇಗೌಡರವರು ಏನು ಹೇಳಿದರು, ಇಲ್ಲಿ ಮಾತನಾಡುವ ಸಂದರ್ಭದಲ್ಲಿ, ಸ್ವಲ್ಪ ಹೆಚ್ಚು ಕಡಿಮೆ ಆಗಿರುತ್ತದೆ. ಅದಕ್ಕಾಗಿ ಏನಿದ್ದರೂ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ ಎನ್ನುವ ಮಾತನ್ನು ಹೇಳಿದರು. ಆದರೆ ಅದೇ ಒಂದು ಸೌಜನ್ಯ ಮಾನ್ಯ ಶಿವಕುಮಾರ್‌ರವರಿಗೆ ಬರಲಿಲ್ಲ, ಬಹುಶಃ ಶ್ರೀ ಶಿವಕುಮಾರ್‌ರವರು ಆಯಿತು ಇದನ್ನು ಇಲ್ಲಿಗೆ ಮುಗಿಸೋಣ, ಏನೋ ನಿಮ್ಮ ಮನಸ್ಸಿಗೆ ನೋವು ಆಗಿದ್ದರೆ ನಾವು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿ ಬಿಟ್ಟಿದ್ದರೆ ಅಲ್ಲಿಗೆ ಆ ಚಾಪ್ಟರ್ ಕ್ಲೋಸ್ ಆಗುತ್ತಿತ್ತು. ನಾವು ಸದನವನ್ನು ನಡೆಸಬೇಕು, ಇಲ್ಲಿ ಎಲ್ಲಾ ಬಿಸಿನೆಸ್ ನಡೆಯಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಬೆಳಿಗ್ಗೆಯಿಂದ, ಮಧ್ಯಾಹ್ನದವರೆಗೆ ಎಲ್ಲಾ ಬಿಸಿನೆಸ್‌ಗಳು ನಡೆದಿವೆ, ಪ್ರಶ್ನೋತ್ತರ ವೇಳೆ ಆಗಿದೆ, ಶೂನ್ಯ ವೇಳೆ ನಡೆಯುತ್ತಾ ಇದೆ. ಮಾನ್ಯ ಸೋಮಶೇಖರ್‌ರವರು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದರು, ಇಂಥ ಸಂದರ್ಭದಲ್ಲಿ, ಈ ರೀತಿ ಸರಳವಾಗಿ ಸದನ ನಡೆದಂಥ ಸಂದರ್ಭದಲ್ಲಿ, ಈ ರೀತಿಯ ಮಾತಿನ ಒಂದು ಹೇಳಿಕೆಯಿಂದ ಈ ರೀತಿಯ ಒಂದು ಸಂಘರ್ಷಕ್ಕೆ ಈಡಾಗಿದ್ದು, ಇದು ನಮಗೂ ಬೇಕಾಗಿಲ್ಲ, ನಾವು ಸದನ ನಡೆಯಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಇದು ಸರ್ಕಾರದ ಹಂತದಲ್ಲಿ, ಸರ್ಕಾರದ ಕಡೆಯಿಂದ, ಮಂತ್ರಿಗಳು ಮನಸ್ಸು ಮಾಡಿದ್ದರೆ ಇವತ್ತು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಇತ್ತು. ಆದರೆ ಅದನ್ನು

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಏನು ಮಾಡಿಲ್ಲ. ಅದಕ್ಕಾಗಿ ನಾನು ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಮಂತ್ರಿಗಳಿಗೆ ಹೇಳಿ, ಆ ಒಂದು ಪದವನ್ನು ಬಳಸಿ ಅವರೇನು ಆಪಾದನೆ ಮಾಡಿದ್ದಾರೆ ಅದನ್ನು ದಯವಿಟ್ಟು ತಕ್ಷಣವೇ ಹಿಂತೆಗೆದುಕೊಳ್ಳಿ ಎಂದು. ಆ ಬಗ್ಗೆ ಈ ಸಭೆಯ ಮುಂದೆ ವಿಷಾದ ವ್ಯಕ್ತಪಡಿಸಲಿ, ನಾವು ಮುಂದೆ ಸದನವನ್ನು ನಡೆಸುವುದಕ್ಕೆ ತಯಾರು ಇದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವಣ್ಣನವರು ಒಂದು ಕಡೆ ಒಂದು ಮಾತು ಹೇಳುತ್ತಾರೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ನೆರಮನೆಯ ದುಃಖಕ್ಕೆ ಅಳುವವರ
ಮೆಚ್ಚ ಕೂಡಲಸಂಗಮದೇವ." ಎಂದು

ಅವರು ಮಾಡಿರುವ ತಪ್ಪನ್ನು ಬೇರೆಯವರ ಮೇಲೆ ಹಾಕಿಬಿಟ್ಟು, ಅದೇನೋ ಗಾದೆ ಹೇಳುತ್ತಾರಲ್ಲಾ, "ಕೋತಿ ಮೊಸರಾ ತಿಂದು ಮೇಕೆಯ ಬಾಯಿಗೆ ಒರಸಿತು" ಆರದ ಹಾಗೆ ಆ ನ್ಯಾಯವನ್ನು ನಮ್ಮ ಸ್ನೇಹಿತರು ಮಾಡುತ್ತಿದ್ದಾರೆ. ಇಲ್ಲಿ ಬಂದಂಥ ವಿಚಾರ, ಯಾವುದೋ ಒಂದು ರೆಫರೆನ್ಸ್ ಮಾಡುವಂಥ ಸಂದರ್ಭದಲ್ಲಿ ಜ್ಞಾನೇಂದ್ರ ಅವರು ಬೇರೆ ಬೇರೆ ಸಂದರ್ಭ ತೆಗೆದುಕೊಂಡು ನಮ್ಮ ಹಮ್ಮು ಎಂದು ಮಾತನಾಡುತ್ತಿದ್ದಾರೆ, ಅದು ಬೇರೆ ವಿಚಾರ. ನಿಜ ನನಗೆ ಬಹಳ ಹಮ್ಮು ಇರಬಹುದು. ಅದು ಬೇರೆ ವಿಚಾರ. ಆದರೆ ಇಲ್ಲಿ ಯಾವುದೋ ಒಂದು ರೆಫರೆನ್ಸ್ ತೆಗೆದುಕೊಂಡು ನಮ್ಮ ಮಂತ್ರಿಗಳು, ಸರ್ಕಾರದ ಒಬ್ಬ ಮಂತ್ರಿಗಳು, ಒಂದು ಮಗುವಿಗೆ ಸಕ್ಸೆಸ್‌ಫುಲ್ ಆದಂಥ ಆಫರೇಷನ್ ಬಗ್ಗೆ ಸರ್ಕಾರದ ಪರವಾಗಿ, ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಹೋಗಿ, ಶುಭ ಹಾರೈಸಿ ಬಂದಂಥ ವಿಚಾರದಲ್ಲಿ ಮೆಚ್ಚುಗೆಯನ್ನು ಕೂಡ ಹೇಳುತ್ತಾ ಅವರು ಏನು ಹೇಳಿದರು ಎಂದರೆ ಅವರು XXX ಮಗುವಿಗೆ ನೀವು ಹೋಗಿ ಇಂಥ ಕೆಲಸ ಮಾಡುವಂಥ ಸಂದರ್ಭ ಅನ್ನುವುದನ್ನು ಒಂದು XXX ವೆಂದು ಹೇಳಿದರು. ಅಂದರೆ ನಮ್ಮ ಸರ್ಕಾರ ಇಲ್ಲಿರುವಂಥ ಸರ್ಕಾರ ಮತ್ತು ನಾವು ಹೋಗಿ XXX ಶುಭ ಹಾರೈಸಿದ್ದೇವೆ ಎಂದರು, ಅಂದರೆ ಮಕ್ಕಳು, ಮಕ್ಕಳ ಹೃದಯ, ಅಂದರೆ, ಅದು ಪಾಕಿಸ್ತಾನದ ಮಗು ಇರಬಹುದು, ಇಂಡಿಯಾದ ಮಗು ಇರಬಹುದು, ಬೇರೆ ಯಾವುದೇ ದೇಶದ ಮಗು ಆಗಿರಬಹುದು, ಇದು ಮಗುವೆಂದು ಒಂದು ಮಗುವಿಗೆ ತೀರ್ಮಾನ ಮಾಡುವುದಾದರೆ, ಮಗು ದೇವರ ಸಮಾನ. ಇಂಥ ಮಗುವನ್ನು XXX ಮಗು ಎಂದು ಹೇಳುವುದಾದರೆ, ಬಹುಶಃ XXX ಪಾಕಿಸ್ತಾನ ಆಗಿರಬಹುದು ಅಥವಾ ಬೇರೆ ಯಾವುದೇ ದೇಶವಾಗಿರಬಹುದು. ನಮಗೂ ಅವರಿಗೂ ಬೇಕಾದಷ್ಟು ವಿಭಿನ್ನ ವಿಚಾರಗಳಿರಬಹುದು. ಇದನ್ನು XXX ವೆಂದು ಘೋಷಣೆ ಮಾಡಿದವರು ಯಾರು? How they can call it as "XXX" ಹಾಗಾದರೆ XXX ಮಗುವಿಗೆ ಈ ಸರ್ಕಾರ ಹೋಗಿ ಪ್ರೋತ್ಸಾಹ ಕೊಟ್ಟಿತೆ, ಶುಭಹಾರೈಸಿ, ಮುಖ್ಯ

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಂತ್ರಿಗಳಿಂದ ಸಂದೇಶ ಹೋಯಿತೇ ಎನ್ನುವಂಥ ವಿಚಾರಗಳನ್ನು, ತಾನು ಮಾಡಿದಂಥ ತಪ್ಪುಗಳನ್ನು ಒಂದು ಕಡೆ ಮುಚ್ಚಿಬಿಟ್ಟು, ಈಗ ಅದರ ಮಧ್ಯದಲ್ಲಿ ಚರ್ಚೆಯನ್ನು ಮಾಡಿದಾಗ, ನಿಜ ನಾನು ಇದನ್ನು ಮಾತನಾಡಿದಂಥ ಸಂದರ್ಭದಲ್ಲಿ ನೀವು ಕೇಳಿದ್ದಕ್ಕೆ ನೀವು XXX ಕೆಲಸ ಮಾಡುತ್ತೀರಿ ಎಂದು ಹೇಳಿದ್ದು ನಿಜ. ಅದು ಆದತಕ್ಷಣ ವಿಶ್ವೇಶ್ವರ ಹೆಗಡೆಯವರು, ಬೇಕಾದರೆ ಕಡತವನ್ನು ತಾವು ತರಿಸಿ ನೋಡಿ, XXX ದ ಏಜೆಂಟ್ ಅಂದರು, ಇಲ್ಲಿರುವ ಎಲ್ಲಾ ಶಾಸಕರಿಗೆ, ರಾಮದಾಸ್‌ರವರು XXX ಏಜೆಂಟ್ ಅಂದರು, ಹಾಗಾದರೆ ನಾವೆಲ್ಲಾ ಆ ರೀತಿ ಅನ್ನಿಸಿಕೊಂಡು ನಿಮ್ಮ ಕಡೆಯಿಂದ ಕೇಳಿಸಿಕೊಂಡು ಕುಳಿತುಕೊಳ್ಳಬೇಕೆ? ಈ XXX ಎನ್ನುವ ಪದ ಇದನ್ನು ಯಾರು ತೀರ್ಮಾನ ಮಾಡಿದವರು? ಇದೇ ಒಂದು ಮನೆಯಲ್ಲಿ ರಾಜೀವ್‌ಗಾಂಧಿಯವರು ಪ್ರಧಾನಿ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಸಾರ್ಕ್ ನಡೆಯಿತು. ಹಾಗಾದರೆ, ಈ ಸಾರ್ಕ್ ಕಾನ್ಸೆಪ್ಟ್ ಏನು? ಇವತ್ತಿನ ದಿವಸ ನಾವು ಬೇಕಾದಷ್ಟು ವಿಚಾರದಲ್ಲಿ ಮತ್ತು ಭಾರತದ ಸಂಸ್ಕೃತಿಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ಕೂಡ ನಾವೆಲ್ಲರೂ ಜೊತೆಯಲ್ಲಿರಬೇಕೆಂಬ ಉದ್ದೇಶ ನಮ್ಮದಾಗಿದೆ. ಇವತ್ತಿನ ದಿವಸ ಅಕ್ಕಪಕ್ಕದಲ್ಲಿ ಬೇಕಾದಷ್ಟು ಭಿನ್ನಾಭಿಪ್ರಾಯಗಳು ಇರಬಹುದು. ಆದರೆ, XXX ವೆಂದು ಘೋಷಣೆ ಮಾಡದೇ ಇರತಕ್ಕಂಥದ್ದಕ್ಕೆ ನಾವು ಬೆಂಬಲ ಕೊಡುವುದಕ್ಕೆ ಸಾಧ್ಯವೇ? ಈ ಸದನದಲ್ಲಿ ನಾವು ಇದಕ್ಕೆ ಬೆಂಬಲ ಕೊಟ್ಟೆವು ಎನ್ನತಕ್ಕಂಥ ಪದದ ಅರ್ಥದಲ್ಲಿ ಅವರು ಹೇಳುವುದಾದರೆ, ಇದಕ್ಕೆ ಅವರೇ ಉತ್ತರ ಹೇಳಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ಅವರಿಗೆ ಮನಸ್ಸು ಬಹಳವಾಗಿ ನೊಂದಿರಬಹುದು. ಆದರೆ, ನಮ್ಮ ಮನಸ್ಸು ಕೂಡ ನೊಂದಿದೆ. ಹಾಗಾದರೆ, ನಾವೆಲ್ಲರೂ XXX ಏಜೆಂಟ್‌ಗಳೇ? ಮೊದಲು ಅವರು ಇದನ್ನು ಹೇಳಬೇಕು. ಇವತ್ತಿನದಿವಸ ನಮಗೂ ಕೂಡ ಜವಾಬ್ದಾರಿ ಇದೆ. ಅವರದೂ ಕೂಡ ಎರಡನೇ ಟರ್ಮ್ ಇರಬಹುದು. ಮತ್ತೆ ನಾನೂ ಕೂಡ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮೂರು ಟರ್ಮ್ ಆಯ್ಕೆಯಾಗಿದ್ದು, ಎರಡನೇ ಬಾರಿ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ನನಗೂ ಕೂಡ ನನ್ನ ವಿಚಾರದಲ್ಲಿ ಏನು ಕೆಲಸ ಮಾಡುತ್ತಿದ್ದೇನೆ ಎನ್ನತಕ್ಕಂಥ ಅರಿವು ಇದೆ. ಆದ್ದರಿಂದ, ಅವರು ಕ್ಷಮಾಪಣೆ ಕೇಳಬೇಕೆಂದು ಹೇಳುತ್ತಿದ್ದಾರೆ. ಆದರೆ, ನಾನು ತಪ್ಪೇನೂ ಹೇಳಿಲ್ಲ. ಈ ಮಧ್ಯದಲ್ಲಿ ತಾವೊಂದು ತೀರ್ಮಾನ ಕೊಟಿದ್ದೀರಿ. ಆ ತೀರ್ಮಾನಕ್ಕೆ ನಾನೇನು ಚಕಾರ ಎತ್ತಲಿಲ್ಲ. ಇದನ್ನು ಬಿಟ್ಟು ರಾಜಕಾರಣ ಮಾಡಬೇಕು ಮತ್ತು ಇನ್ನೊಂದು ಏನಾದರು ಮಾಡಬೇಕು ಎನ್ನುವುದಾದರೆ ಬಹುಶಃ ಅವರು ಏನು ಬೇಕಾದರು ಮಾಡಲಿ. "ಪುಣ್ಯ ಕಾಯುವ ಕೈಯಲ್ಲಿ ಪುರುಷೋತ್ತಮನೂ ಕೂಡ ಅಂಜಬೇಕಂತೆ." ಇದು ನಮ್ಮ ಲೋಕವಾಣಿಯಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಆ ಒಂದು ಮಗುವಿಗೆ ನಾವು ಕೊಟ್ಟಂಥ ರಕ್ಷಣೆ, ಪ್ರೀತಿ ಮತ್ತು ಪ್ರೋತ್ಸಾಹದ ಬಗ್ಗೆ ಅವರು ಬಹಳ ಅವಹೇಳನಕಾರಿಯಾಗಿ ಮಾತನಾಡಿ ನಮ್ಮನ್ನಲ್ಲದೆ, ಇಡೀ ಮಕ್ಕಳ ಒಂದು ಸಮುದಾಯಕ್ಕೆ ಹಾಗೂ ಭಾರತದ ಹೃದಯ ಶ್ರೀಮಂತಿಕೆಗೆ ಅವಮಾನ ಮಾಡಿದ್ದಾರೆ. ಆದ್ದರಿಂದ, ಅವರು ಈ ಸಮಾಜಕ್ಕೆ, ಈ ರಾಜ್ಯಕ್ಕೆ ಹಾಗೂ ಈ ಸಮುದಾಯಕ್ಕೆ ಕ್ಷಮಾಪಣೆ ಕೇಳತಕ್ಕಂಥದ್ದು ಉತ್ತಮವೆಂದು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಮಾನ್ಯ ಸಭಾನಾಯಕರೂ ಕೂಡ ಇದ್ದಾರೆ. ಈಗಾಗಲೇ ನಾನು ಮಾತನಾಡುವಾಗ ಬಹಳ ಸ್ಪಷ್ಟವಾಗಿ ಮಾತನಾಡಿದ್ದೇನೆ. ಬಹುಶಃ ಈ ಸಭೆಯಲ್ಲಿ ನಡವಳಿಕೆಗಳು ನಡೆಯುವಂಥ ಸಂದರ್ಭದಲ್ಲಿ ಇಲ್ಲಿರತಕ್ಕಂಥ ಮಾನ್ಯ ಸಚಿವರುಗಳು ಮತ್ತು ಎಲ್ಲಾ ಮಾನ್ಯ ಶಾಸಕರುಗಳಲ್ಲದೆ ಇಲ್ಲಿ ಮಾಧ್ಯಮ ಮಿತ್ರರು ಹಾಗೂ ಆಫೀಸ್ ಗ್ಯಾಲರಿಯಲ್ಲಿ ಅಧಿಕಾರಿಗಳು ಮತ್ತು ಮೇಲ್ಗಡೆ ಇರತಕ್ಕಂಥ ಗ್ಯಾಲರಿಯಲ್ಲಿ ಸಾರ್ವಜನಿಕರು ಕುಳಿತು ನೋಡುತ್ತಿರುತ್ತಾರೆ. ಹಾಗೆಯೇ ಸರ್ಕ್ಯೂಟ್ ಟಿ.ವಿ.ಯಲ್ಲಿ ಇದನ್ನು ನೋಡತಕ್ಕಂಥದವರು ಕೂಡ ಇಲ್ಲಿದ್ದಾರೆ. ನಮ್ಮ ಒಂದೊಂದು ಶಬ್ದವನ್ನು ಕಣ್ಣು, ಕಿವಿಯಲ್ಲಿ ಆಲಿಸತಕ್ಕಂಥವರೇ ಇಲ್ಲಿದ್ದಾರೆ. ನಾನು ಈಗಾಗಲೇ ಏನು ಮಾತನಾಡಿದ್ದೇನೆ ಎನ್ನತಕ್ಕಂಥ ಅರಿವು ನನಗೆ ಇದೆ. ನಾನು ಅರಿವನ್ನು ಇಟ್ಟುಕೊಂಡು ಮಾತನಾಡಿದ್ದೇನೆ. ನಮ್ಮ ಮಂಡಗದ್ದೆಯ ಒಬ್ಬ ಮನುಷ್ಯ 21 ವರ್ಷಗಳ ಕಾಲ ಆಕಸ್ಮಿಕವಾಗಿ ಪಾಕಿಸ್ತಾನಿ ಸೈನಿಕರ ಕೈಯಲ್ಲಿ ಸಿಕ್ಕಿಕೊಂಡು ನರಕಯಾತನೆ ಅನುಭವಿಸಿ 21 ವರ್ಷಗಳ ನಂತರ ಆಕಸ್ಮಿಕವಾಗಿ ಬಿಡುಗಡೆಯಾಗಿ ಮನೆಗೆ ಬಂದನಂತರವು ಕೂಡ ಆತನ ಹೆತ್ತ ತಾಯಿಯೂ ಸಹ ಆತನನ್ನು ಗುರುತು ಹಿಡಿಯುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಆತ ಬಂದಿದ್ದ. ನಮ್ಮ ಸರ್ಕಾರ ಮೊನ್ನೆ ಮೊನ್ನೆ ದಿವಸ ಇಲ್ಲಿಗೆ ಬಂದಿರತಕ್ಕಂಥ ನೂರ್ ಫಾತಿಮ ಎಂಬ ಮಗುವಿಗೆ ಹೃದಯ ಚಿಕಿತ್ಸೆಯನ್ನು ಇಲ್ಲಿ ಕೊಡಿಸಿ, ಮಾನ್ಯ ಮುಖ್ಯಮಂತ್ರಿಯವರ ನಿಧಿಯಿಂದ ಇದಕ್ಕಾಗಿ ಹಣಕೊಟ್ಟು, ಮತ್ತೆ ನಮ್ಮ ರಾಜ್ಯದ ಒಬ್ಬ ಕ್ಯಾಬಿನೆಟ್ ಸಚಿವರು ಅಲ್ಲಿಗೆ ಹೋಗಿ ಶುಭ ಹಾರೈಸಿ ನಮ್ಮ ರಾಜ್ಯದ ಒಂದು ಹೃದಯವಂತಿಕೆಯನ್ನು ಮತ್ತು ನಮ್ಮ ರಾಜ್ಯ ಏನು ಎನ್ನತಕ್ಕಂಥ ಸಾಂಸ್ಕೃತಿಕ ಹಿರಿಮೆಯನ್ನು ಸಾರಿ ಬಂದಿದ್ದಾರೆ. ಇದು ನಮ್ಮ ದೊಡ್ಡ ಗುಣ ಎಂದು ಹೇಳುತ್ತಾ..

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಸದಸ್ಯರು ಒಂದು ನಿಮಿಷ ಯೀಲ್ಡ್ ಆಗಬೇಕು. XXX ವೆಂದು ಹೇಳಿದ್ದಾರೆ.

ಗೊಂದಲ

ಶ್ರೀ ಬಿ.ಆರ್. ನೀಲಕಂಠಯ್ಯ : ಹಾಗಾದರೆ XXX ಬಸ್ಸ್‌ನ್ನು ಏತಕ್ಕೆ ಬಿಟ್ಟಿದ್ದೀರಿ?

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಸುಮ್ಮನೆ ಇದ್ದೆವು. ಆದ್ದರಿಂದ ನಾನು ಮಾತನಾಡಿ ಮುಗಿಸುವುದಕ್ಕೆ ಅವಕಾಶ ಕೊಡಿ. ನಮ್ಮ XXX ಬಂದಿರತಕ್ಕಂಥ ಒಂದು ಮಗುವಿಗೆ ಈ ರೀತಿಯಾದ ನಮ್ಮ ಹೃದಯವಂತಿಕೆಯನ್ನು ತೋರಿಸುವಂಥ ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಿದೆ. ಹಾಗೆಯೇ, ಎರಡು ರಾಷ್ಟ್ರಗಳ ಕೊಂಡಿಗಳನ್ನು ಬೆಸೆಯತಕ್ಕಂಥ ದೃಷ್ಟಿಯಿಂದ ಇದು ಅಗತ್ಯ ಇತ್ತು. ಇದೇ ಒಂದು ಮಾನವೀಯ ದೃಷ್ಟಿಯಿಂದ ನನ್ನ ಕ್ಷೇತ್ರದಲ್ಲಿ ಒಬ್ಬ ಮನುಷ್ಯ 21 ವರ್ಷಗಳ ಕಾಲ ಅಲ್ಲಿ ಹೊಡೆತ ತಿಂದು ಇವತ್ತಿನದಿವಸ ಆತ ಕೇವಲ ಚರ್ಮ ಮತ್ತು ಎಲುಬಿನಿಂದ ಇಲ್ಲಿಗೆ ಬಂದು ಬಿದ್ದಿದ್ದಾನೆ. ಆತನ ಬಗ್ಗೆ ನಮ್ಮ ಸರ್ಕಾರ ಏನಾದರೊಂದು ಅನುಕಂಪವನ್ನು ತೋರಿಸಿ ಆತ ನೆಮ್ಮದಿಯಿಂದ ಬದುಕುವುದಕ್ಕೆ ಮಾರ್ಗ ತೋರಿಸಲಿ ಎನ್ನುವಂತ ನಿಟ್ಟಿನಲ್ಲಿ ನಾನು ಹೇಳಿದ್ದೇನೆ. ನಾನು ಇಷ್ಟು ಹೇಳಿರುವುದನ್ನು ಬಿಟ್ಟರೆ, XXX

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಬಂದಿಗತಕ್ಕಂಥವರಿಗೆ ಸರ್ಕಾರ ಹೂಗುಚ್ಛ ಕೊಟ್ಟು ಮತ್ತು ಹಣ ಕೊಟ್ಟರು ಎನ್ನತಕ್ಕಂಥ ನಿಟ್ಟಿನಲ್ಲಿ ನಾನೇನಾದರೂ ಹೇಳಿರುವುದಾದರೆ, ತಾವು ನನ್ನ ರೆಕಾರ್ಡ್ಸ್ ತೆಗೆಸಿ ನೋಡಬೇಕೆಂದು ಕೇಳಿಕೊಳ್ಳುತ್ತೇನೆ. XXX ರಾಷ್ಟ್ರ ಎನ್ನತಕ್ಕಂಥ ಪದವನ್ನು ನಾನು ಉಪಯೋಗಿಸಿದ್ದೇನೆ. ಪಾಕಿಸ್ಥಾನ ಒಂದು XXX ಎಂದು ಉಪಯೋಗಿಸುವುದಕ್ಕೆ ನಮಗ್ಯಾರಿಗೂ ಕೂಡ ಹಿಂಜರಿಕೆ ಇಲ್ಲ. ಏಕೆಂದರೆ, ಈ ರಾಷ್ಟ್ರದಲ್ಲಿ, ರಾಷ್ಟ್ರದ ಬಗ್ಗೆ ಸಾಮಾನ್ಯ ಪ್ರಜ್ಞೆ ಇರತಕ್ಕಂಥ ಮನುಷ್ಯನೂ ಕೂಡ ಪಾಕಿಸ್ತಾನವನ್ನು XXX ಎಂದೇ ಕರೆಯುತ್ತಾನೆ. ಆದರೆ, ನೀವು ಏನು ಎನ್ನತಕ್ಕಂತದ್ದು ನಮಗೆ ಗೊತ್ತಿಲ್ಲ. ಈ ರಾಷ್ಟ್ರ ಭಕ್ತರು.

ಗೊಂದಲ

ಈ ರಾಷ್ಟ್ರದಲ್ಲಿರುವಂಥ ಮಾಧ್ಯಮಗಳ ಮುಖಾಂತರ ಬರುವಂತದ್ದಾಗಲಿ ಅಥವಾ ಈ ರಾಷ್ಟ್ರದಲ್ಲಿ ಲೇಖಕರು ಲೇಖನಗಳನ್ನು ಬರೆಯತಕ್ಕಂಥ ಸಂದರ್ಭದಲ್ಲಿ ಅಥವಾ ಈ ರಾಷ್ಟ್ರದಲ್ಲಿ ಯಾವುದೇ ಸಂದರ್ಭದಲ್ಲಿ ಪಾಕಿಸ್ತಾನವನ್ನು ಸಂಬೋಧನೆ ಮಾಡತಕ್ಕಂಥ ಸಂದರ್ಭದಲ್ಲಿ ಇತ್ತೀಚೆಗೆ ಕಾಶ್ಮೀರದಲ್ಲಿ ಆದಂಥ ಯುದ್ಧ ಮತ್ತು ಅಲ್ಲಿ ನಡೆಸುಕೊಂಡಿರತಕ್ಕಂಥ ರೀತಿ ನಮ್ಮ ರಾಷ್ಟ್ರದ ಸಂಸತ್ತಿನ ಮೇಲೆ ಹಾಗು ಸಾಮಾನ್ಯ ಜನರ ಮಾನ, ಪ್ರಾಣದ ಮೇಲೆ ಅದು ನಡೆಸಿರತಕ್ಕಂಥ ಧಾಳಿಯನ್ನು ನೋಡಿದಾಗ ಪಾಕಿಸ್ತಾನಕ್ಕೆ ಈ ಶಬ್ದವನ್ನು ನಾವು ಸಾಮಾನ್ಯ ಮತ್ತು ಸಹಜವಾದ ಭಾಷೆಯಲ್ಲಿ ಉಪಯೋಗಿಸಿದಾಗ, ನಮ್ಮ ಮಾನ್ಯ ಸಚಿವರು, ನಮ್ಮ ಜನರಿಂದ ಆಯ್ಕೆಯಾಗಿ ಈ ಸದನದ ಗೌರವಾನ್ವಿತ ಶಾಸಕರಾಗಿ ಮತ್ತು ಕರ್ನಾಟಕ ರಾಜ್ಯದ ಒಬ್ಬ ಮಂತ್ರಿಯಾಗಿ ಅವರಿಗೆ ಏಕೆ ಉರಿಯುತ್ತದೆ? ಮತ್ತು ಅವರಿಗೆ ಏಕೆ ಸಿಟ್ಟು ಬರುತ್ತದೆ ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಅವರು ಇದ್ದಕ್ಕಿದ್ದ ಹಾಗೆ ಮೇಲಕ್ಕೆ ಎದ್ದು, ಪಾಕಿಸ್ತಾನವನ್ನು XXX ಎಂದು ಕರೆಯತಕ್ಕಂಥ ನೀವು XXX ಎನ್ನತಕ್ಕಂಥ ಶಬ್ದವನ್ನು ಬಳಕೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಮಾನ್ಯ ಶಿವಕುಮಾರ್ ರವರ ಮೇಲೆ ನನಗೆ ವೈಯಕ್ತಿಕವಾಗಿ ಗೌರವ ಇದೆ. ಹಾಗೆಯೇ ನನ್ನ ವೈಯಕ್ತಿಕ ಸ್ನೇಹಿತರೂ ಕೂಡ ಆಗಿದ್ದಾರೆ. ಆದರೆ, ಇವತ್ತು ಅವರು ನಡೆದುಕೊಂಡಿರತಕ್ಕಂಥ ರೀತಿ ಬಹುಶಃ ಅವರ ನಡವಳಿಕೆಗೆ ಮತ್ತು ಅವರು ಹೊಂದಿರತಕ್ಕಂಥ ಸ್ಥಾನಮಾನಗಳಿಗೆ ಖಂಡಿತವಾಗಿ ಶೋಭೆ ತರತಕ್ಕಂಥ ವಿಚಾರವಲ್ಲ. ಅವರು ಒಬ್ಬ ಸಾಮಾನ್ಯ ಪ್ರಜೆಯಲ್ಲ. ಈ ರಾಜ್ಯದ ಒಬ್ಬ ಗೌರವಾನ್ವಿತ ಮಂತ್ರಿ ಆಗಿದ್ದಾರೆ. ಈ ರಾಜ್ಯದ ಸಂಸ್ಕೃತಿಗೆ ಮತ್ತು ಈ ರಾಜ್ಯದ ಜನರ ಭಾವನೆಗಳಿಗೆ ಸ್ಪಂದಿಸಬೇಕಾಗಿರುವಂಥವರು ಈ ರೀತಿ ಆವೇಶಭರಿತವಾಗಿ ಅಥವಾ ಎಲ್ಲೋ ಯೋಚನೆ ಮಾಡುತ್ತಾ ಇದ್ದಕ್ಕಿದ್ದ ಹಾಗೆ ನನ್ನ ಬಗ್ಗೆ ಏನೋ ಒಂದು ರೀತಿಯಲ್ಲಿ ಪೂರ್ವಾಗ್ರಹಪೀಡಿತರಾಗಿ ಮೇಲಕ್ಕೆ ಎದ್ದು ನೀವೆಲ್ಲಾ XXX ಎನ್ನುವ ರೀತಿಯಲ್ಲಿ ಅವರು ಸಂಬೋಧನೆ ಮಾಡಿರತಕ್ಕಂಥ ರೀತಿ ನಮಗೆ ಅತ್ಯಂತ ನೋವನ್ನು ತಂದಿದೆ. ನಾವು ರಾಷ್ಟ್ರ ಪ್ರೇಮದ ಪಾಠವನ್ನು ಮಾನ್ಯ ಶಿವಕುಮಾರ್ ಅವರಿಂದ ಕಲಿಯಬೇಕಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಈ ಸಂಸ್ಕಾರದಿಂದ ನಾವು ಮೇಲೆ ಎದ್ದು ಬಂದಿದ್ದೇವೆ. ನಮ್ಮನ್ನು ರಾಜಕೀಯ ದೃಷ್ಟಿಯಿಂದ ಏನು ಬೇಕಾದರು ಹೇಳಲಿ. ಅದಕ್ಕೆ ಏನು ತೊಂದರೆಯಿಲ್ಲ. ಆದರೆ XXX ಎನ್ನತಕ್ಕಂಥ ಪಾಠ ಮಾನ್ಯ ಶಿವಕಯಮಾರ್ ಅವರಿಂದಾಗಲಿ ಅಥವಾ ಇನ್ನೊಬ್ಬರಿಂದಾಗಲಿ ಇವತ್ತಿನ ದಿವಸ ನಾನಾಗಲಿ ಅಥವಾ ನಮ್ಮ ಪಕ್ಷದ ಯಾರೊಬ್ಬ ಸದಸ್ಯರೂ ಕೂಡ ಕಲಿಯತಕ್ಕಂಥ ಅವಶ್ಯಕತೆ ಇಲ್ಲ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಈ ರಾಷ್ಟ್ರಕ್ಕೆ ಯಾವಾಗಲೂ ಕೂಡ ಯಾವುದೇ ಒಂದು ಅರ್ಪಣೆ ಬೇಕಾದರೂ ಕೂಡ ಬಹುಶಃ ನಮ್ಮಿಂದ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಮಾನ್ಯ ಸಚಿವರು ತುಂಬಾ ಗಾಂಭೀರ್ಯದಿಂದ ತೆಗೆದುಕೊಳ್ಳಬೇಕಾಗುತ್ತದೆ. ಸಂಸದೀಯ ನಡವಳಿಕೆಗಳನ್ನು ಯಾವರೀತಿ ಮಾಡಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ತಿಳಿದುಕೊಳ್ಳಬೇಕು. ಏಕೆಂದರೆ, ಅವರು ನನಗಿಂತ ವಯಸ್ಸಿನಲ್ಲಿ ಮತ್ತು ಅನುಭವದಲ್ಲಿ ಹಿರಿಯರಾಗಿದ್ದಾರೆ. ಕರ್ನಾಟಕ ರಾಜ್ಯದ ಶಾಸನಸಭೆ ಬಹಳ ಉನ್ನತವಾಗಿರತಕ್ಕಂಥ ಒಂದು ಮಟ್ಟವನ್ನು ಕಾಯ್ದುಕೊಂಡು ಬಂದಿದೆ. ಇಂಥ ಸಂದರ್ಭದಲ್ಲಿ ನಾವು ಇಲ್ಲಿ ಮಾತನಾಡತಕ್ಕಂಥ ಒಂದೊಂದು ಶಬ್ದವೂ ಕೂಡ ಇಲ್ಲಿ ರೆಕಾರ್ಡ್ ಆಗುತ್ತದೆ. ಇವತ್ತಿನದಿವಸ ಅವರು ಹೇಳಿರತಕ್ಕಂಥ ಮಾತನ್ನು ರಾಷ್ಟ್ರದ ಜನ ನೋಡುತ್ತಾರೆ. ನಮ್ಮ ಹಿರಿಯರು ಆಗಿರತಕ್ಕಂಥ ಮಾನ್ಯ ಚಂದ್ರೇಗೌಡರನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಬಹಳ ಹಿರಿಯರು ಆಗಿರತಕ್ಕಂಥ ಇವರು ಸಂಸದೀಯ ನಡವಳಿಕೆಗಳ ಎಲ್ಲಾ ಸ್ಥಾನಮಾನಗಳಲ್ಲಿ ಅವರು ಕುಳಿತು ಎದ್ದು ಬಂದಂಥವರು ಇವತ್ತಿನ ದಿವಸ ಅವರಿಗೆ ಇದು ಅರಿವು ಆದಕೂಡಲೇ ಅವರು ಎದ್ದು ನಿಂತು ನಿಮ್ಮ ಮನಸ್ಸಿಗೆ ಏನಾದರೂ ನೋವು ಆಗಿದ್ದರೆ ಸರ್ಕಾರದ ಪರವಾಗಿ ನಾನು ವಿಷಾದಿಸುತ್ತೇನೆ ಎಂದು ಹೇಳಿದರು. ಇಲ್ಲಿ ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಪಕ್ಷ ಪಂಗಡ ಮತ್ತು ನಾವು ಕೊಟ್ಟು ತೆಗೆದುಕೊಳ್ಳತಕ್ಕಂಥದ್ದು ಬೇಕಾದಷ್ಟು ಇದ್ದಾಗ್ಯೂ ಕೂಡ ಮತ್ತು ನಾವು ಎಲ್ಲಾದರು ಬಾಯಿ ತಪ್ಪಿ ಹೇಳಿರತಕ್ಕಂಥ ಮಾತನ್ನು ವಾಪಸ್ಸು ತೆಗೆದುಕೊಳ್ಳುವುದರಲ್ಲಿಯೂ ಕೂಡ ದೊಡ್ಡಸ್ಥಿಕೆ ಇರುತ್ತದೆ. ಇದರಿಂದ ನಾವೇನೂ ಚಿಕ್ಕವರು ಆಗುವುದಿಲ್ಲ. ನಾನು ಸರ್ಕಾರದ ಬಗ್ಗೆ ಏನಾದರೂ ಕಿಚಾಯಿಸಿ ಮಾತನಾಡಿದ್ದರೆ ಮತ್ತು ಯಾವುದೋ XXX ನೀವು ಮರ್ಸಿ ತೋರಿಸಿದ್ದೀರಿ ಎನ್ನತಕ್ಕಂಥ ರೀತಿಯಲ್ಲಿ ನಾನು ಏನಾದರೂ ಮಾತನಾಡಿರತಕ್ಕಂಥದ್ದನ್ನು ತಾವು ಸಭೆಯ ನಡವಳಿಕೆಯನ್ನು ತೆಗೆದು ಓದಿ ತೋರಿಸಿದರೆ ನಾನು ಈ ಸಭೆಯಲ್ಲಿ ಕ್ಷಮೆಯಾಚಿಸುವುದಕ್ಕೆ ತಯಾರಿದ್ದೇನೆ. ಆದರೆ, ಯಾವುದೇ ಒಂದು ಹಿನ್ನಲೆ ಇಲ್ಲದೆ ಅವರು ಹೇಳಿರತಕ್ಕಂಥ ಶಬ್ದ ಈ ಸದನದ ನಡವಳಿಕೆಗಾಗಲಿ ಮತ್ತು ಅವರ ಸ್ಥಾನಮಾನಗಳಿಗಾಗಲಿ ಶೋಭೆ ತರತಕ್ಕಂಥದ್ದಲ್ಲ ಎಂದು ಹೇಳುತ್ತಾ, ಇದನ್ನು ಅವರು ದಯಮಾಡಿ ವಾಪಸ್ಸು ತೆಗೆದುಕೊಂಡು ಇದಕ್ಕೆ ವಿಷಾದ ವ್ಯಕ್ತಪಡಿಸಬೇಕೆಂಬ ಮಾತನ್ನು ನಾನು ಮತ್ತೊಮ್ಮೆ ಈ ಸದನದ ಮೂಲಕ ಅವರಿಗೆ ವ್ಯಕ್ತಪಡಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಈಗ ಮಾಡಿದಂಥ ಕೆಲಸ, ಪ್ರೋತ್ಸಾಹ ಮತ್ತು ನಮ್ಮ ಮಂತ್ರಿಗಳು XXX ಹೋಗಿ ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ಅವರೇ ಮತ್ತೆ ಹೇಳುತ್ತಿದ್ದಾರೆ. ನಮ್ಮ ಸ್ನೇಹಿತರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ,

"ಮಾತಿನಂ ನಗೆನುಡಿಯು,
ಮಾತಿನಂ ಹಗೆಕೆಳೆಯು
ಮಾತಿನಂ ಸರ್ವಸಂಪತ್ತು
ಲೋಕಕ್ಕೆ ಮಾತೇ ಮಾಣಿಕ್ಯ,

ಎಂದು ಸರ್ವಜ್ಞ ಹೇಳಿದ್ದಾನೆ. ಅಂದರೆ, ಮಾತನಾಡುವಾಗ ಬಹಳ ಹಿತವಾಗಿರಬೇಕೆಂದು ಸ್ನೇಹಿತರಿಗೆ ಹೇಳುತ್ತಾ ನಾನು ಹೆಚ್ಚು ಏನನ್ನೂ ಹೇಳುವುದಕ್ಕೆ ತಯಾರಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

4.10 ಪಿ ಎಂ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರ ಅವರು ಹೇಳಬಹುದಾದ ಮೆಚ್ಚುಗೆಯ ಮಾತುಗಳನ್ನೆಲ್ಲಾ ನನ್ನ ಪರವಾಗಿ ಹೇಳಿದರೇ ವಿನಃ ನಾನು ಕ್ಷಮೆ ಕೇಳಿದ್ದೀನೆ ಎಂದು ಒಪ್ಪಿಕೊಂಡು ಕುಳಿತುಕೊಳ್ಳುವ ಸೌಜನ್ಯವನ್ನು ತೋರಲಿಲ್ಲ. ಅಷ್ಟು ಮಾಡಿದ್ದರೆ ಎಲ್ಲಾ ಸರಿ ಹೋಗುತ್ತಿತ್ತು. ಎರಡನೆಯದಾಗಿ, ಅನೇಕ ವಿಚಾರಗಳಲ್ಲಿ ಅವರು ನಮ್ಮ ನಾಯಕರ ಜೊತೆ ಮುಖ್ಯಮಂತ್ರಿಗಳ ಜೊತೆ ಸಂಪರ್ಕ ಮಾಡುತ್ತಿರುತ್ತಾರೆ, ನಾರಾಯಣನಿಗೆ ತೊಂದರೆ ಆಗಿದೆ ಏನಾದರೂ ಸಹಾಯ ಮಾಡಿ ಎಂದು ಕೇಳಿದ್ದರೆ ಖಂಡಿತ ಅವರು ಸಹಾಯ ಮಾಡುತ್ತಿದ್ದರು, ಖಂಡಿತ ಅವರು ಇಲ್ಲವೆಂದು ಹೇಳುತ್ತಿರಲಿಲ್ಲ, ಅಷ್ಟು ಮಾಡದೆ ಸದನದಲ್ಲೇ ಆಗಬೇಕು ಏತಕ್ಕೆ ಅವರು ಈಗ ಹಠ ಮಾಡುತ್ತಿದ್ದಾರೋ? ಅವನಿಗೆ ಅನ್ಯಾಯವಾಗಿದೆ, 21 ವರ್ಷ ಜೈಲಿನಲ್ಲಿದ್ದಾನೆ ಅವನಿಗೆ ಏನಾದರೂ ಸಹಾಯ ಮಾಡಿ ಎಂದು ಕೇಳಿದ್ದರೆ ಅವರು ಇಲ್ಲ ಅನ್ನುತ್ತಿರಲಿಲ್ಲ. ಪಾಕಿಸ್ತಾನ ಭಾರತಗಳ ಸಂಬಂಧವೇನು ಎಂಬುದನ್ನು ಸದನದಲ್ಲಿ ಚರ್ಚೆ ಮಾಡಿ ಎಂದು ನಾವು ಹೇಳಿದ್ದೇವೆಯೇ? ಶ್ರೀಮಾನ್ ವಾಜಪೇಯಿ ಅವರು ಬಸ್ ಬಿಡಬೇಕು ಎಂದು ಹೇಳಿದ್ದರು, ಬಸ್ ದಿಲ್ಲಿಯಿಂದ ಲಾಹೋರ್‌ಗೆ ಹೋಯಿತು, ಬಸ್ ಅನ್ನು ಬಿಡುಗಡೆ ಮಾಡಿದ ಮೊದಲನೇ ದಿವಸ ಶ್ರೀಮತಿ ನೂರ್ ಅವರು ಮಗುವನ್ನು ಕರೆದುಕೊಂಡು ಬಂದಿದ್ದರು. ಆದ್ದರಿಂದ ನಮ್ಮ ಸಂಬಂಧ ತುಂಬಾ ಚೆನ್ನಾಗಿದೆ ಎಂದು ಅವರಿಗೆ ಮಾಡಬಹುದಾದಂಥ ಅತಿಥ್ಯವನ್ನೆಲ್ಲಾ ಮಾಡಿ, ಆ ಮಗುವಿಗೆ ಹೃದಯ ಚಿಕಿತ್ಸೆಯನ್ನು ಮಾಡಿಸಿ ಸಂತೋಷದಿಂದ ಕಳುಹಿಸಿಕೊಟ್ಟೆವು. ಆದರೂ ಸಹ ನಮ್ಮ ಸ್ನೇಹಿತರಿಗೆ ಯಾಕೆ ಅದು ಆ ರೀತಿ XXX ಕಾಣಿಸಿತು? ಬಸ್ ದಿಲ್ಲಿಯಿಂದ ಲಾಹೋರ್‌ಗೆ, ಲಾಹೋರ್‌ನಿಂದ ದಿಲ್ಲಿಗೆ ಬರಬಹುದು, ಆಮೇಲೆ ಇವರಿಗೆ ಶಿಕ್ಷೆಯಾಗಿತ್ತು ಎನ್ನುವ ವಿಷಯವಾಗಿ ಹೇಳುವುದಾದರೆ, ಮಾನವೀಯ ದೃಷ್ಟಿಯಿಂದ ಅದನ್ನು ನೋಡಬೇಕು. ಎರಡು ರಾಷ್ಟ್ರಗಳ ಸಂಬಂಧವನ್ನು ಇವರು ಹೇಗೆ, ಏಕೆ ಬಿಟ್ಟರು ಎಂಬ ಬಗ್ಗೆ ಮಾಹಿತಿ ಇಲ್ಲವೆಂದು ಬೆಳಿಗ್ಗೆ ಹೇಳಿದ್ದೇನೆ. ಇದನ್ನೇ ಹಠ ಮಾಡಿಕೊಂಡು ಕುಳಿತರೆ, ಅಂದರೆ ನಾರಾಯಣನಿಗೆ ಪರಿಹಾರ ಸಿಗಬೇಕು ಎನ್ನುವ ಉದ್ದೇಶವಿಲ್ಲ. ಪಾಕಿಸ್ತಾನವನ್ನು XXX ಎಂದು ಬಿಂಬಿಸಬೇಕು. ಇದು ಎರಡು ಉದ್ದೇಶಕ್ಕಾದರೆ ನೀವು ಮಾಡಬಹುದು. ಇದನ್ನೇ ದೊಡ್ಡ ವಿಚಾರವೆಂದು ತಿಳಿದುಕೊಂಡು ಸದನದ ಎಲ್ಲಾ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸುವಂತಹದು ಒಂದು ರಾಷ್ಟ್ರೀಯ ಪಕ್ಷಕ್ಕೆ ಶೋಭೆ ತರುವಂತಹದ್ದಲ್ಲ. ಆದ್ದರಿಂದಲೇ ನಾವು ಈಗ ಎಲ್ಲೋ ಒಂದು ಹಂತದಲ್ಲಿ ಜಗ್ಗಬೇಕು. ಈ ಸಂಸದೀಯ ವ್ಯವಹಾರಗಳಲ್ಲಿ ಎಲ್ಲೋ ಒಂದು ಕಡೆ ಜಗ್ಗಬೇಕು. ತಾವು ಹೇಳಿದ್ದನ್ನು, ಮಾನ್ಯ ಶಿವಕುಮಾರ್ ಹೇಳಿದ್ದನ್ನು ಕಡತದಿಂದ ತೆಗೆದು ಹಾಕಿದ್ದೇವೆ ಎಂದು ಸ್ಪಷ್ಟವಾಗಿ ತಾವು ಆದೇಶ ಕೊಟ್ಟಿದ್ದೀರಿ. ಕಡತದಲ್ಲೇ ಅದು ಇಲ್ಲವೆಂದ ಮೇಲೆ ಚರ್ಚೆಯನ್ನು ಎಷ್ಟೊತ್ತು, ಹೇಗೆ ನಡೆಸುವುದು? ನನಗಂತೂ ಅರ್ಥವಾಗುತ್ತಿಲ್ಲ, ಇಷ್ಟಾದರೂ ನಾವು ದಿನ ಒಂದಲ್ಲ ಒಂದು ಕಾರಣಕ್ಕೆ ಮುಷ್ಕರ ಹೂಡುತ್ತೇವೆ ಅಂದರೆ ಅದನ್ನು ಅವರಿಗೆ ಬಿಡುತ್ತೇನೆ. ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ಶಬ್ಧಗಳು ಯಾವುದೂ ಕಡತದಲ್ಲಿಲ್ಲ. ಆ ಶಬ್ದಗಳನ್ನು ಬಳಕೆ ಮಾಡಿದ್ದರು ಎಂದು ಪುನಃ ಪುನಃ ಅದನ್ನೆ ಹೇಳಿಕೊಂಡು ಹೋಗುವುದರಿಂದ ಮತ್ತೆ ಮತ್ತೆ ನೀವು ಸಹ ಅದನ್ನು ಕಡತದಿಂದ ತೆಗೆಯಿರಿ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಅದನ್ನು ನಿಲ್ಲಿಸಿ ಸದನದ ಕಾರ್ಯಕಲಾಪಗಳನ್ನು ಮಾಡೋಣ, ಇನ್ನು ಮೂರು ನಾಲ್ಕು ದಿವಸದಲ್ಲಿ ನಾವು ಸದನವನ್ನು ಮುಂದೂಡುವುದರಲ್ಲಿ ಇದ್ದೇವೆ. ಅದು ಬಿಟ್ಟು ಇದರ ಬಗ್ಗೆ ಪ್ರತಿಷ್ಠೆ ಮಾಡಿಕೊಂಡು ಇಲ್ಲಿ ಅವರು ಮುಷ್ಕರ ಮಾಡುವುದು, ಬಾವಿಯೊಳಗೆ ಬರುವುದು ಸರಿಯಿಲ್ಲ ಎಂದು ಹೇಳಿ ಮಾನ್ಯ ನಾಯಕರಲ್ಲಿ ಮತ್ತೊಮ್ಮೆ ಅಪೀಲ್ ಮಾಡಿ ನಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಶ್ರೀಮಾನ್ ಚಂದ್ರೇಗೌಡರು ಹೇಳಿದ ಮಾತುಗಳನ್ನು ನಾವೆಲ್ಲರೂ ಕೂಡ ಆಲಿಸಿದ್ದೇವೆ. ಇಲ್ಲಿ ಮೂರು ವಿಚಾರಗಳಿವೆ. ಶ್ರೀಮಾನ್ ಚಂದ್ರೇಗೌಡರ ಗಮನಕ್ಕೆ ಒಂದು ವಿಚಾರವನ್ನು ಬಹಳ ವಿನಮ್ರನಾಗಿ ತರಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಸಂಗತಿ ಒನ್‌ವೇ ಟ್ರಾಫಿಕ್ ಆಗಬಾರದು. ಅದು ಟೂವೇ ಟ್ರಾಫಿಕ್ ಆಗಿರಬೇಕು.

ಮಾನ್ಯ ಸದಸ್ಯರು : ನೀವು ಮಾಡುವುದಕ್ಕಿಂತ ಹೆಚ್ಚಾಗಿ ಒನ್ ವೇ ಟ್ರಾಫಿಕ್ ಯಾರೂ ಮಾಡುತ್ತಿಲ್ಲ. ದಯವಿಟ್ಟು ತಾವು ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ನಮಗೆ ಬುದ್ಧಿವಾದ ಹೇಳುತ್ತಿದ್ದೀರಾ ಆದರೆ ಒನ್ ವೇ ಟ್ರಾಫಿಕ್ ಆಗಬಾರದು. ಈಗ ಬೈಪಾಸ್ ಸಿಟಿಯಲ್ಲಿರುವುದಿಲ್ಲ, ಈಗ ಸನ್ಮಾನ್ಯ ಶಿವಕುಮಾರ್ ರವರು ಈ ಸಭೆಯ ಸಾಮಾನ್ಯ ಸದಸ್ಯರಲ್ಲ, ಅವರು ಹೇಳಿದ ಹಾಗೆ ಮೂರು ಸಲ ಗೆದ್ದು ಎರಡು ಸಲ ಸಚಿವರಾಗಿ ಈ ಬಾರಿ ಇಡೀ ರಾಜ್ಯಕ್ಕೆ ತಿಳಿದಿರುವ ಹಾಗೆ ಬಹಳ ಪ್ರಭಾವಶಾಲಿ ಸಚಿವರು. ಅದು ಯಾವಾಗ ನಮಗೆ ಗೊತ್ತಾಗುತ್ತದೆ ಅಂದರೆ ಮಾನ್ಯ ಚಂದ್ರೇಗೌಡರು ಯಾವಾಗ ನಮ್ಮನ್ನೇ ಕೂರಿಸಲಿಕ್ಕೆ ಪ್ರಯತ್ನಿಸುತ್ತಿದ್ದಾರೆ, ಅವರನ್ನು ಕೂರಿಸಲಿಕ್ಕೆ ಪ್ರಯತ್ನಿಸುತ್ತಿಲ್ಲ. ಆಗಲೇ ನಮಗೆ ಗೊತ್ತಾಗುತ್ತದೆ ಅವರೆಷ್ಟು ಪ್ರಭಾವಶಾಲಿ ಸಚಿವರು ಎಂದು. ಎರಡನೆಯದಾಗಿ, ನಾನು ಪೂರ್ಣವಾಗಿ ಮಾನ್ಯ ಚಂದ್ರೇಗೌಡರು ಹೇಳಿದ್ದನ್ನು ಅಂದರೆ ಸಂಸದೀಯ ನಡವಳಿಕೆ ಯಾವ ರೀತಿ ಇರಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ನಿಜ, ಇವತ್ತೆಲ್ಲಾ ಬಾಂಧವ್ಯ ಸುಧಾರಿಸಲಿಕ್ಕೆ ಆರಂಭವಾದಾಗ ಯಾವುದೇ ರಾಷ್ಟ್ರವನ್ನು XXX ಎಂದು ಕರೆಯುವುದು ಸರಿಯಿರದೇ ಇರಬಹುದು. ಆದರೆ ಮಾನ್ಯ ಜ್ಞಾನೇಂದ್ರ ಅವರು ಪಾಕಿಸ್ತಾನಕ್ಕೆ ಧಿಕ್ಕಾರ ಎನ್ನಲಿಲ್ಲ, XXX ಎಂದು ಅಟ್ಯಾಕ್ ಮಾಡಲಿಲ್ಲ, ಅವರು ಒಂದು ಸಿಮಿಲಿ ತಂದರು. ಈ ರೀತಿ ಒಂದು ಬಾಂಧವ್ಯವಿರುವ ರಾಷ್ಟ್ರದಿಂದ ಮಗು ಬಂತು, ಆ ಮಗುವಿಗೆ ನಾವು ಚಿಕಿತ್ಸೆ ಮಾಡಿಸಿದೆವು ಎಂದು. ಆದ್ದರಿಂದ ಅಕಸ್ಮಾತ್ ಶಿವಕುಮಾರ್ ಅವರಿಗೆ ಬೇಸರವಾಗಿದ್ದರೆ ಪಾಕಿಸ್ತಾನ XXX ಕೇಳಿದ್ದು ಬೇಸರವಾಗಿದ್ದರೆ ಅವರು ಅದನ್ನು ನಿಲ್ಲಿಸಿ, ಆ ಮಾತನ್ನು ಹೇಳಬೇಡಿ ಎಂದು ಹೇಳಬಹುದಾಗಿತ್ತು. ಆಗ ಅದು ಅವರ ಸೌಜನ್ಯ, ಪ್ರೇಮ ಹಾಗೂ ಅವರು ಹೇಳಿದ ಹಾಗೆ ಅವರ ಅನುಭವವನ್ನು ತೋರಿಸುತ್ತಿತ್ತು. ಆ ಮೂರನ್ನೂ ಕೂಡ ಮಾಡದೇನೇ ನೀವೆಲ್ಲಾ XXX ಎನ್ನುವುದು ಅವರ ಸಚಿವ ಸ್ಥಾನಕ್ಕೆ ಯಾವುದೇ ರೀತಿಯಿಂದ ಶೋಭಿಸುವಂತಹ ವರ್ತನೆ ಅಲ್ಲ. ಇದನ್ನು ನಾವೆಲ್ಲಾ

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅರ್ಥಮಾಡಿಕೊಳ್ಳಬೇಕು. ಮೂರನೆಯದಾಗಿ, ಅವರೆಲ್ಲಾ ಹೇಳಿದರು, XXX ಆ ರೀತಿ ಇಲ್ಲಿಂದ ಬಂದಿದ್ದರೆ, ಅವರು ಏನು ನಮಗೆ XXX ಎಂದು ಹೇಳಿದರು ಅದಾದ ನಂತರ ಬಂದಿದ್ದರೆ ಖಂಡಿತ ಅದನ್ನು ವಾಪಸ್ ತೆಗೆದುಕೊಂಡು ವಿಷಾದ ವ್ಯಕ್ತಪಡಿಸಲು ಸಿದ್ಧರಿದ್ದೇವೆ. ಅದು ಯಾವಾಗ ಆದದ್ದು?

It was a counter-blass.

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಸೀಕ್ವೆನ್ಸ್ ಆಗಿ ಹೇಳುತ್ತಾ ಬರುತ್ತಿದ್ದೇನೆ. ನಾವು ಈ ತರಹ ತೋಳ್ಬಲಕ್ಕೆ ಹೆದರುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ತೋಳ್ಬಲ ನಾವು ಮಾಡಲಿಲ್ಲ. ತೋಳ್ಬಲ ಅಲ್ಲ ಅದು.

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ಒಂದು ಸೀಕ್ವೆನ್ಸ್ ತಮ್ಮ ಮುಂದೆ ಇಟ್ಟಿದ್ದೇನೆ. ಸೌಜನ್ಯ ಇರುವುದು ಈಗ ಶ್ರೀ ಶಿವಕುಮಾರ್ ಅವರ ಕೋರ್ಟಿನಲ್ಲಿ. The ball is in Shivakumar's court ಮಾನ್ಯ ಚಂದ್ರೇಗೌಡರು ಆಗಲೇ ಹೇಳಿದ ಹಾಗೆ ಅವರು ಸುಮ್ಮನಿದ್ದಿದ್ದರೆ ಆಗುತ್ತಿತ್ತು. ಮತ್ತೆ ನಿಂತುಕೊಂಡು I am unrepentful ಎಂದು ಅದನ್ನೇ ಮತ್ತೆ ಮತ್ತೆ ರಿಪೀಟ್ ಮಾಡಿದರು, ಈಗ ತಮ್ಮ ಮೂಲಕ ಶ್ರೀ ಶಿವಕುಮಾರ್ ಅವರನ್ನು ಕೇಳಿಕೊಳ್ಳುವುದು, ಏನೆಂದರೆ, ಆ ಪದನ್ನು ವಾಪಸ್ಸು ತೆಗೆದುಕೊಂಡರೆ ಅವರೇನು ಬಹಳ ಚಿಕ್ಕವರಾಗುವುದಿಲ್ಲ. ಮೂರು ಸಲ ಶಾಸಕರಾಗಿದ್ದಾರೆ, ಎರಡು ಸಲ ಸಚಿವರಾಗಿದ್ದಾರೆ, XXX ಎನ್ನುವುದು ಯಾರಿಗೆ ಆಗಲಿ ತರವಲ್ಲ. ಮಾನ್ಯ ಜ್ಞಾನೇಂದ್ರರವರ ಸ್ಥಳದಲ್ಲಿ ಶ್ರೀ ಶಿವಕುಮಾರ್‌ರವರು ಇದ್ದಿದ್ದರೆ ಪ್ರಾಯಶಃ ಇದು ರಣರಂಗವಾಗಿ ಬಿಡುತ್ತಿತ್ತು. ಮಾನ್ಯ ಜ್ಞಾನೇಂದ್ರ ಅವರು ಸಜ್ಜನರು, ತೀರ್ಥಹಳ್ಳಿ ಕ್ಷೇತ್ರದಿಂದ ನಮ್ಮ ಚಂದ್ರೇಗೌಡರವರ ಕ್ಷೇತ್ರದಿಂದ ಬಂದಿದ್ದಾರೆ. ಅದಕ್ಕೋಸ್ಕರ ಬಹಳ ಸಜ್ಜನಿಕೆಯಿಂದ ಮಾತನಾಡಿದ್ದಾರೆ. ಆದ್ದರಿಂದ ನಮ್ಮ ನಾಯಕರ ಪರವಾಗಿ ನಾನು ಹೇಳುತ್ತೇನೆ, ಇಲ್ಲಿಂದ ಏನಾದರೂ XXX ಎಂದು ನಮ್ಮ ಕಡೆಯಿಂದ ಬಂದಿದ್ದರೆ ಅದರಿಂದ ಅವರಿಗೆ ನೋವಾಗಿದ್ದರೆ ಅದನ್ನು ನಾವು ವಾಪಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಅವರು ನಮ್ಮ ಸ್ನೇಹಿತರು, ನಮ್ಮ ಸಹೋದ್ಯೋಗಿಗಳು, ನಮ್ಮ ಸರ್ಕಾರದ ಪರವಾಗಿ ಹೋಗಿ ಶುಭ ಹಾರೈಸುವಂತಹ ಕೆಲಸ ಮಾಡಿದ್ದಾರೆ. ನಮ್ಮ ಸರ್ಕಾರವು ಮಾಡಿದಂತಹ ಕೆಲಸವನ್ನು ನೀವು ಒಬ್ಬ XXX ದಿಂದ ಬಂದ ಮಗುವಿಗೆ ಮಾಡಿದಿರಿ ಎಂದು ಹೇಳಿದ್ದನ್ನು ಕೇಳಿಕೊಂಡು ನಾನು ಒಬ್ಬ ಸಚಿವನಾಗಿ ಇಲ್ಲಿ ಕುಳಿತು ಕೆಲಸ ಮಾಡಬಹುದೆಂದರೆ, ನಮ್ಮ ಪಕ್ಷಕ್ಕೆ, ನಮ್ಮ ಸರ್ಕಾರಕ್ಕೆ ನಾನು ಇದಕ್ಕಿಂತ ಇನ್ನೇನು ನಿಷ್ಠೆಯನ್ನು ವ್ಯಕ್ತಪಡಿಸಬೇಕು? How can I accept it? ನಮ್ಮ ಸರ್ಕಾರ ಏನು ಸ್ಟ್ಯಾಂಡ್ ತೆಗೆದುಕೊಂಡಿದೆ, ನಮ್ಮ ಸ್ನೇಹಿತರು ಏನು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ, ಇದು ಇಡೀ ದೇಶ, ಪ್ರಪಂಚದ ಗೌರವಕ್ಕೆ ನಮ್ಮ ಹೃದಯ ಎಷ್ಟು ದೊಡ್ಡದಿದೆ, ಎಷ್ಟು ವಿಶಾಲವಾಗಿದೆ ಎಂಬುದನ್ನು ನಮ್ಮ ಸರ್ಕಾರ ತೋರಿಸಿದೆ.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಆ ಕೆಲಸವನ್ನು ನೀವು ನಮ್ಮ xxx ಮಗುವಿಗೆ ಎಂದು ಹೇಳಿದರೆ How can I accept it? ಬಹುಶಃ ನಾನು ಆ ದೃಷ್ಟಿಯಲ್ಲಿ ಹೇಳಲಿಲ್ಲ ಎಂದಿದ್ದರೆ, definitely I would not have used it. ಇಲ್ಲ, ಇಲ್ಲ, ನೀವು xxx ಮಾಡಿದ್ದೀರಿ ಎಂದು ಹೇಳಿದರೆ, ಇನ್ನೇನು ಅಂದಾಗ Yes, I have said: ನೀವು xxx ಎಂದು ಹೇಳಿದರೆ It was also a counter. I had to do it. ಆದ್ದರಿಂದ ಮೊದಲು ಅವರದ್ದು ಆಗಬೇಕು. Still he is telling that word. xxx ಎಂದು ಯಾರಾದರೂ ಡಿಕ್ಲೇರ್ ಮಾಡಿದ್ದಾರೆಯೇ? ಎಲ್ಲಿದೆ, ಯಾರು ಹೇಳಿದ್ದಾರೆ? ನಿಮ್ಮ ಸಿದ್ಧಾಂತದಲ್ಲಿರಬಹುದು, ಕೆಲವರು ಹೇಳುತ್ತಾರೆ, ನಾವೆಲ್ಲಾ ಹಿಂದು, ನಾವೆಲ್ಲಾ ಮುಂದು ಎಂದು ಹೇಳುತ್ತಾರೆ, ನಾವು ಹಿಂದೂಗಳು, ನಾವೆಲ್ಲಾ ಮುಂದು ಎಂದು ತಾವು ಹೇಳುತ್ತೀರಿ, ನಾವು ಹೇಳುತ್ತೇವೆ, ನಾವು ಹಿಂದು ಇರಬಹುದು ಕ್ರಿಸ್ತರು ಇರಬಹುದು ಸಿಖ್ಖರು ಇರಬಹುದು ನಾವೆಲ್ಲಾ ಒಂದು ಎಂದು ಹೇಳುತ್ತೇವೆ. ಅವರು ಹಿಂದು, ಅಂದರೆ ನಾವು ಒಂದು ಎಂದು ಹೇಳುತ್ತೇವೆ. ಇದು ಒಬ್ಬರಿಗೊಬ್ಬರಲ್ಲಿ ತಾರತಮ್ಯ ಇರಬಹದು, ಹಾಗೆ ನಮ್ಮಲ್ಲಿ ಪಕ್ಷದ ರಾಷ್ಟ್ರವಿರಬಹುದು, ಪ್ರೀತಿ ವಿಶ್ವಾಸದಿಂದ ಬಾಳಲಿಕ್ಕೆ ಇವತ್ತು ಹಿಂದೂ ಧರ್ಮ, ಕ್ರೈಸ್ತ ಧರ್ಮ, ಸಿಕ್ ಧರ್ಮ ಯಾವುದೇ ಧರ್ಮ ಇರಬಹುದು, ಎಲ್ಲಾ ಧರ್ಮದಲ್ಲೂ ಕೂಡ ಪ್ರೀತಿ ವಿಶ್ವಾಸವಿದೆ.

ಧರ್ಮ ಯಾವುದಾದರೂ ತತ್ವ ಒಂದೇ, ನಾನು ನೂರಾದರೂ ದೈವ ಒಂದೇ, ಪೂಜೆ ಯಾವುದಾದರೂ ಭಾವ ಒಂದೇ, ಭಾಷೆ ಭಿನ್ನವಾದರೂ ಭಕ್ತಿ ಒಂದೇ, ಕರ್ಮ ಹಲವಾದರೂ ನಿಷ್ಠೆಯೊಂದೇ, ದೇವರು ಒಬ್ಬ, ನಾಮ ಹಲವು. ಆ ಒಂದು ಸಿದ್ಧಾಂತದಲ್ಲಿ ನಾವು ಇರುವುದರಿಂದ, ಸ್ನೇಹಿತರೇ, ನಾನು ಇದರಲ್ಲಿ ಹೆಚ್ಚಿಗೆ ಹೇಳುವುದಕ್ಕೆ ತಯಾರಿಲ್ಲ. ಅವರು ಮಾಡಿದ್ದು ತಪ್ಪು. ಆ ತಪ್ಪನ್ನು ಮೊದಲು ಅವರು ಕೇಳಿಕೊಳ್ಳಲಿ. ಮಿಕ್ಕಿದ್ದು ತಾವು ಏನು ತೀರ್ಮ ಕೊಡುತ್ತೀರಿ, ನಾನು ಅದಕ್ಕೆ ಸಿದ್ಧನಿದ್ದೇನೆ.

ಉಪಾಧ್ಯಕ್ಷರು : ಪಾಟೀಲರೇ, ಏನಾದರೂ ಹೇಳುತ್ತೀರಾ?

ಗೊಂದಲ

ಶ್ರೀ ವಿ. ಪಾಪಣ್ಣ : ಬೆಳಿಗ್ಗೆಯಿಂದ ಸಾಯಂಕಾಲವರೆಗೆ ಹೀಗೆಯೇ ಆದರೆ ಹೇಗೆ? ಸುಮ್ಮನೆ ಕಾಲಹರಣ ಮಾಡುತ್ತಿದ್ದಾರೆ. ಏನು ಸಾರ್ ಇದು?

ಉಪಾಧ್ಯಕ್ಷರು : ನಾನು ಪಾಟೀಲರನ್ನು ಕರೆದಿದ್ದೇನೆ. ನಿಮ್ಮನ್ನು ನಾನು ಕರೆದಿಲ್ಲ. ನೀವು ಮಾತನಾಡಬೇಕು ಎಂದು ಇಚ್ಛೆ ಇದ್ದರೆ ನಿಮಗೂ ಅವಕಾಶ ಕೊಡೋಣ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿವಸ ನಡೆದಂಥ ಘಟನೆ ನಿಜವಾಗಿಯೂ ನಮ್ಮ ಈ ಸದನದ ಇತಿಹಾಸದಲ್ಲಿ ಹಿಂದೆಂದೂ ನಡೆದಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ ಎಂಬುದು ನನ್ನ ಭಾವನೆ. ಬಹುಶಃ ಮಾನ್ಯ ಸಭಾನಾಯಕರು ಇಲ್ಲಿ ಇದ್ದಾರೆ. ನಮ್ಮ ಶ್ರೀ ಡಿ.ಕೆ. ಶಿವಕುಮಾರ್ ಅವರು ಬಹಳ ಉತ್ತಮವಾದಂಥ ಎರಡು ವಚನಗಳನ್ನು ಹೇಳಿದರು.

'ಲೋಕದ ಡೊಂಕನು ನೀವೇಕೆ ತಿದ್ದುವಿರಿ?

ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ಮನವ ಸಂತೈಸಿಕೊಳ್ಳಿ'

ಎಂದು ಬಸವಣ್ಣನವರು ಹೇಳಿದ ವಚನದ ಸಾಲನ್ನೂ ಕೂಡ ಅವರು ಹೇಳಿದರು. ಆಮೇಲೆ ಸರ್ವಜ್ಞನ ವಚನವನ್ನೂ ಸಹ ಅವರು ಹೇಳಿದರು. ಮಾತೇ ಹಗೆಯಾಡಿಸುತ್ತದೆ, ಮಾತೇ ಗೆಳೆತನವನ್ನು ಮಾಡುತ್ತದೆ. ಏನಾಗುವುದೆಲ್ಲಾ ಮಾತಿನಿಂದಲೇ ಆಗುತ್ತದೆ ಎಂದೂ ಕೂಡ ತಾವೇ ಹೇಳಿದರು. ಈ ದೃಷ್ಟಿಯಿಂದ ಇವತ್ತು ನಡೆದಿರುವ ಘಟನೆ ಈ ಎರಡೂ ವಚನಗಳಿಗೆ ಲಾಗೂ ಆಗುತ್ತದೆ. ಆ ಕಾರಣದಿಂದ ನಾನು ಹೇಳುವುದೇನೆಂದರೆ, ಮೊದಲನೆಯದಾಗಿ ಮಾತಿನಿಂದ ಹಗೆ ಹುಟ್ಟಿದೆ. ಆ ಮಾತನ್ನು ನಾವೆಲ್ಲರೂ ಕೂಡ ತಿದ್ದಿಕೊಳ್ಳಬೇಕು, ಮಾತನಾಡುವಾಗ ಯಾರೇ ಇರಲಿ, ಆ ಕಡೆಯುವರು ಇರಲಿ, ಈ ಕಡೆಯುವರು ಇರಲಿ, ಬಹಳ ಎಚ್ಚರಿಕೆಯಿಂದ ನಾವು ಮಾತನಾಡಬೇಕಾಗುತ್ತದೆ. ಬಸವಣ್ಣನವರು ಹೇಳಿದ ಹಾಗೆ 'ಲೋಕದ ಡೊಂಕನು ನೀವೇಕೆ ತಿದ್ದುವಿರಿ?'. ನಾನು ಎರಡನೆಯವರ ತಪ್ಪನ್ನು ಹೇಳುವುದಕ್ಕೆ ಹೋದರೆ ಅದರಿಂದ ಏನು ಪ್ರಯೋಜನ? ನಮ್ಮ ತಪ್ಪನ್ನು ನಾವು ತಿದ್ದಿಕೊಂಡರೆ ಎಲ್ಲವೂ ಶುದ್ಧವಾಗಿ ಬಿಡುತ್ತದೆ. ಇಬ್ಬರೂ ತಿದ್ದಿಕೊಂಡು ಬಿಡಬೇಕು. ಈಗ ತಪ್ಪಾಗಿದೆ. ಇಬ್ಬರೂ ತಿದ್ದಿಕೊಂಡರೆ ಆಯಿತು. ಬಸವಣ್ಣನವರ ವಚನದಂತೆ ತಾವು ಇಬ್ಬರೂ ನಡೆದುಬಿಟ್ಟರೆ ಆ ಪ್ರಶ್ನೆಯೇ ಬರುವುದಿಲ್ಲ. ಸುಮ್ಮನೆ ಏಕೆ ಸದನದ ವೇಳೆಯನ್ನು ಹಾಳು ಮಾಡುತ್ತೀರಿ? ಸದನದ ವೇಳೆ ಹಾಳಾಗಬಾರದು. ನಾವು ಏನಾದರೂ ಒಂದು ಚರ್ಚೆ ಮಾಡಬೇಕಾದರೆ ವೇಳೆ ಇಲ್ಲವೆಂದು ಹೇಳುತ್ತೇವೆ. ಐದು ನಿಮಿಷ, ಎರಡು ನಿಮಿಷ ಎಂದು ನಾವು ಲೆಕ್ಕ ಹಾಕುತ್ತೇವೆ. ಇವತ್ತು ಮಧ್ಯಾಹ್ನದಿಂದ ಇಲ್ಲಿಯವರೆಗೆ ಕಾಲ ಕಳೆದಿದ್ದೇವೆ. ಆದ್ದರಿಂದ ದಯವಿಟ್ಟು ಮಾನ್ಯ ಸಭಾನಾಯಕರು ಎದ್ದು ಏನಾದರೂ ಒಂದು ಹೇಳಿ ಇದನ್ನು ಮುಕ್ತಾಯ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಪಾಪಣ್ಣ : ಮಾನ್ಯ ಉಪಾಧ್ಯಕ್ಷರೇ, ಅವರು ಹೇಳಿಯಾಗಿದೆ. ಇವರು XXX ಎಂದು ಹೇಳಿದ್ದನ್ನು ವಾಪಸ್ಸು ತೆಗೆದುಕೊಂಡರೆ ಆಯಿತು.

ಉಪಾಧ್ಯಕ್ಷರು : ಈಗ ವಿಷಯ ಮುಕ್ತಾಯದ ಹಂತಕ್ಕೆ ಬಂದಿದೆ. ತಾವು ದಯವಿಟ್ಟು ಮತ್ತೆ ಮಾತನಾಡುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾನು ಇದು ಎರಡು ಬಾರಿಯಾಯಿತು, ಮೂರನೇ ಬಾರಿ, ಕೊನೆಯಬಾರಿ ಹೇಳುತ್ತೇನೆ. ಅವರು ಆ ಕಡೆಯಿಂದ ಮಾನ್ಯ ಸುರೇಶ್ ಕುಮಾರ್ 'ಅವರು ಮಾತನಾಡುತ್ತಾ ತಪ್ಪಾಗಿದ್ದರೆ ಕ್ಷಮೆ ಕೇಳುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದರು. ಸನ್ಮಾನ್ಯ ಶಿವಕುಮಾರ್ ಅವರು ಕೂಡ ಅದೇ ಮಾತನ್ನು ಹೇಳಿದ್ದಾರೆ.' ನೀವು XXX ಎಂದು ಹೇಳಿದಿರಿ. ಆದ್ದರಿಂದ ನಾನು ಭಾವನಾತ್ಮಕವಾಗಿ ಆ ಮಾತನ್ನು ಅಂದಿದ್ದೇನೆ' ಎಂದು ಹೇಳಿದ್ದಾರೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಆದ್ದರಿಂದ ನೀವೂ ಅದನ್ನು ಒಪ್ಪಿಕೊಂಡು, ಅವರೂ ಅದನ್ನು ಒಪ್ಪಿಕೊಂಡಮೇಲೆ, ಇನ್ನು ಪ್ರತಿಯೊಂದು ಮೇಲೆ ನಿಲ್ಲುವುದರಲ್ಲಿ ಏನೂ ಅರ್ಥ ಇಲ್ಲ. ನೀವಿಬ್ಬರೂ ಹೇಳಿರುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ, ಇಡೀ ಸದನ ಒಪ್ಪಿಕೊಂಡಿದೆ. ತಾವು ಕೂಡ ಒಪ್ಪಿಕೊಂಡಿದ್ದೀರಿ. ಆದ್ದರಿಂದ XXX ಎಂದು ಕರೆದಿದ್ದರಿಂದ ಆ ಶಬ್ದ ಬಳಸಿದ್ದೇನೆ ಎನ್ನುವ ಮಾತನ್ನು ಅವರು ಹೇಳಿದರು. ಆದ್ದರಿಂದ ಇದನ್ನು ಬೆಳೆಸಿಕೊಂಡು ಹೋದಹಾಗೆ ಕಹಿ ಜಾಸ್ತಿಯಾಗುತ್ತಲೇ ಹೋಗುತ್ತದೆ ಹೊರತಾಗಿ ಬೇರೇನೂ ಆಗುವುದಿಲ್ಲ. ಇನ್ನು ಈ ಸದನ ಎರಡು-ಮೂರು ದಿವಸ ನಡೆಯುತ್ತದೆ. ಆದ್ದರಿಂದ ಇದನ್ನು ಒಂದು ರೀತಿಯಿಂದ ಸಮಾಧಾನದಿಂದ ನಡೆಸಿಕೊಂಡು ಹೋಗಬೇಕು ಎನ್ನುವುದು ನನ್ನ ಸವಿಚ್ಛೆ. ಈ ಕಾರಣದಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಂಡ ಹಾಗೆ ಅವರಲ್ಲೂ ಮನವಿ ಮಾಡಿಕೊಳ್ಳುತ್ತೇನೆ. ಸದನದ ಕಲಾಪಗಳು ನಡೆಯುವುದಕ್ಕೆ ನೀವು ಇಂಡೈರೆಕ್ಟ್ ಆಗಿ ಒಪ್ಪಿಕೊಂಡರು, ಒಂದು ಸಲ ಡೈರೆಕ್ಟಾಗಿ ನೇರವಾಗಿ 'ಆಯ್ತಪ್ಪ, ನಮ್ಮದೂ ತಪ್ಪಾಗಿದೆ. Let us forget and forgive ಎನ್ನುವಂಥದ್ದು ನನ್ನ ಸಲಹೆ ಅಷ್ಟೆ. ಅದಕ್ಕಿಂತ ಹೆಚ್ಚು ಏನು ಹೇಳೋಣ ನಾವು? ಮತ್ತೆ ರೆಕಾರ್ಡನ್ನು ಹುಡುಕುವುದಕ್ಕೆ ಹೋದರೆ ಜ್ಞಾನೇಂದ್ರ ಅವರೇ, ನಿಮ್ಮ ಜ್ಞಾನ ಇದರಿಂದ ಬಳಕೆಯಾಗುತ್ತದೆಯೇ ಹೊರತು ಸಮಸ್ಯೆ ಪರಿಹಾರ ಆಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಹೇಳುವುದು ಇಷ್ಟೆ. ಮನವು ಮಲ್ಲಿಗೆಯಾಗಿದ್ದರೆ ನಿಮ್ಮ ಮಾತಿನಲ್ಲಿ ಪರಿಮಳ ತುಂಬಿರುತ್ತಿತ್ತು. ಆದರೆ ಪರಿಮಳದ ಬದಲು ತಳಮಳ ಇತ್ತು. ಅದಕ್ಕೋಸ್ಕರ ಈ ಸಂದರ್ಭ ನಿರ್ಮಾಣವಾಯಿತು.

ಶ್ರೀ ಎಸ್. ಸುರೇಶ್ ಕುಮಾರ್ : ಸರ್, ನನಗೆ ಕವನ, ವಚನ ಯಾವುದೂ ಬರುವುದಿಲ್ಲ. ನನಗೆ ಚೀಟಿಯನ್ನು ಕಳಿಸುವವರು ಯಾರೂ ಇಲ್ಲ. ಈಗ ಪ್ರಶ್ನೆ ಇರುವುದು ಬಹಳ ಸಿಂಪಲ್. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಅವರು XXX ಎಂದು ಜ್ಞಾನೇಂದ್ರರನ್ನು ಉದ್ದೇಶಿಸಿ ಮಾತನಾಡಿದ್ದಕ್ಕೆ ನಮಗೆಲ್ಲರಿಗೂ ಕೂಡ ಕೋಪ ಬಂದಿದೆ. ನಮ್ಮ ಮನಸ್ಸು ನೊಂದಿದೆ, ನಮಗೆ ಬೇಜಾರಾಗಿದೆ. ಇದು ಯಾವುದೋ ಒಂದು ಸೈಡ್ ಡ್ರಮ್ ಇರುತ್ತದಲ್ಲಾ, ಆ ತರಹ ಬೇಡ. ನಿಜವಾಗಿಯೂ ಕೂಡ ನಮಗೆ ಬೇಜಾರಾಗಿದೆ. ಪಾಕಿಸ್ತಾನವನ್ನು XXX ಎಂದರೆ ಅವರಿಗೇಕೆ ಬೇಜಾರು ಆಗಬೇಕು? ನಮಗೆ ಬೇಜಾರಾಗಿದೆ. ಏಕೆಂದರೆ ನಾವು ಇಲ್ಲಿ ಕುಳಿತಿರುವವರು, ನಮಗೆ ನೇರವಾಗಿ ಹಾಗೆ ಹೇಳಿದ್ದಕ್ಕೆ ಬೇಜಾರಾಗಿದೆ. ಅದನ್ನು ನೀವು ವಾಪಸ್ಸು ತೆಗೆದುಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ನಾವು ಯಾವುದೋ ಬೇರೆ ರಾಷ್ಟ್ರದ ಬಗ್ಗೆ ಇಲ್ಲಿ ಉಲ್ಲೇಖ ಮಾಡಿದ್ದೇವೆ. ಅದು ಸರಿಯಿಲ್ಲವೆಂದರೆ ನಿಮ್ಮ ಇಷ್ಟ...

ಗೊಂದಲ

ಶ್ರೀ ಎಂ. ದಿವಾಕರ ಬಾಬು : ಪಾಕಿಸ್ತಾನ XXX ಎಂದು ಅಲ್ಲ, XXX ಮಗುವಿಗೆ ನಾವು ಅನುಕಂಪವನ್ನು ತೋರಿಸುತ್ತಾ ಇದ್ದೇವೆ....

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ದಿವಾಕರಬಾಬು ಅವರ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ, ಆದರೆ ನಾವು ಮಾತನಾಡಿದ್ದನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ.

ಗೊಂದಲ

ಉಪಾಧ್ಯಕ್ಷರು : ಈಗ ದಯವಿಟ್ಟು ಒಂದು ಮಾತು. ಈಗ ಮಾನ್ಯ ಶಿವಕುಮಾರ್ ಅವರು ಕೂಡ ವಿಷಾದ ವ್ಯಕ್ತಪಡಿಸುವ ರೀತಿಯಲ್ಲಿ ಮಾತನಾಡಿದ್ದಾರೆ. ಆ ಮೊದಲು ಅವರು ಆ ರೀತಿಯಾಗಿ ಆಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ, ನಂತರ ಅಧ್ಯಕ್ಷರು ಏನು ಹೇಳುತ್ತಾರೋ ಅದನ್ನು ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಅದಕ್ಕೆ ಈಗ ಇವರು, ನಾವು

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ಇಷ್ಟಿಲ್ಲದಿದ್ದರೆ ತೆಗೆದುಹಾಕಿಸಲಿ. ಆದರೇ XXX ಎಂದು ಏನು ಹೇಳಿದ್ದಾರೆ, ಅದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ. ಅದಕ್ಕೆ ಕ್ಷಮೆ ಕೇಳಬೇಕಾಗುತ್ತದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ವಿಷಾದ ವ್ಯಕ್ತಪಡಿಸುತ್ತಾರೆ, ಆದರೆ ಅವರಿಗೆ ಆಗುವುದಿಲ್ಲವೇನು? ಹಾಗಾದರೆ ಅವರಿಗೆ ಅನ್ನಿಸುವುದಿಲ್ಲವೇನು? XXX ಎಂದು ಅನ್ನಿಸಿಕೊಂಡು ನಾವು ಇಲ್ಲಿ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ಯಾವರೀತಿಯಾಗಿ ನಾವು ಇಲ್ಲಿ ಕೆಲಸ ಮಾಡಬೇಕು? ತಾವಾದರೂ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು : ಆಯಿತು. ಈಗ ಬಹಳಷ್ಟು ಶಬ್ದಪ್ರಯೋಗಗಳೂ ಕೂಡ ಇಲ್ಲಿ ಆಗಿದೆ. ಅದನ್ನು ನೀವು ಕಡತ ತರಿಸಿ ನೋಡಿದರೆ ಬಹಳ ಜನ ಕ್ಷಮೆ ಕೇಳಬೇಕಾಗುತ್ತದೆ. ಅದು ಬೇಡ. ಕಡತ ತರಿಸಿದರೆ ಇಲ್ಲಿ ಬೇರೆ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ಮಾತನಾಡಿದ್ದಾರೆ. ಅದಕ್ಕೋಸ್ಕರ ನಾನು ಹೇಳುವುದು...

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಪ್ರಾರಂಭ ಎಲ್ಲಿ ಆಯಿತು, ಏಕೆ ಮಾಡಿದರು... ಅದರ ಬಗ್ಗೆ ಹೇಳಬಹುದಾಗಿತ್ತಲ್ಲ.

ಗೊಂದಲ

ಉಪಾಧ್ಯಕ್ಷರು : ಈಗ ಆ ವಿಚಾರವಾಗಿ ಇವತ್ತು XXX ಕ್ಕೆ ನೀವು ಮಾಡಿದ ಉಪಕಾರ ಎನ್ನುವ ಅರ್ಥದಲ್ಲಿ ಅವರು ಆವೇಶದಲ್ಲಿ ಮಾತನಾಡಿದ್ದಾರೆ....

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನ ಎಂದು XXX ಹೇಳಿದ್ದಕ್ಕೆ ನಾವು ವಿಷಾದ ವ್ಯಕ್ತಪಡಿಸುತ್ತೇವೆ. ಆ ರೀತಿ ಪದಪ್ರಯೋಗ ಮಾಡಿದ್ದು ಸರಿಯಲ್ಲವೆಂದು ವಿಷಾದ ವ್ಯಕ್ತಪಡಿಸುತ್ತೇವೆ. ಅವರು ಹೇಳಿದ್ದಕ್ಕೆ ಆ ಕಡೆಯಿಂದ ವಿಷಾದ ವ್ಯಕ್ತಪಡಿಸಲಿ..

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಉಪಾಧ್ಯಕ್ಷರು : ಅಂದರೆ ಅವರು ......

ಉಪಾಧ್ಯಕ್ಷರು : ಹಾಗಲ್ಲ. ಅವರೂ ಕೂಡ ಒಂದು ಅರ್ಥದಲ್ಲಿ ಏನಾಗುತ್ತದೆ ಅಂದರೆ...

ಶ್ರೀ ಜಗದೀಶ್ ಶೆಟ್ಟರ್ : ಅಂದರೆ ಬಿ ಜೆ ಪಿ ಶಾಸಕರು XXX

ಉಪಾಧ್ಯಕ್ಷರು : ಅಂತಹ XXX ಇರುವಂಥವರಿಗೆ ನೀವು ಮಾಡಿಸಿದಿರಿ ಅಂದರೆ ಸರ್ಕಾರಕ್ಕೆ ಏನೋ ಒಂದು ಇದು ಬರುತ್ತದೆ ಎನ್ನುವ ಅರ್ಥದಲ್ಲಿ ಅವರು ಆ ರೀತಿ ಹೇಳಿದ್ದಾರೆ...

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಅದಕ್ಕೋಸ್ಕರ ನಾನು ನಿಮ್ಮ ಹತ್ತಿರ ಮನವಿ ಮಾಡಿಕೊಂಡೆ, ದಯವಿಟ್ಟು ನೀವು ಸಭೆಯನ್ನು ಮುಂದೂಡುವುದಕ್ಕಿಂತ ಮುಂಚಿತವಾಗಿ ಕಡತವನ್ನು ತರಿಸಿ ಎಂದು. ದಯವಿಟ್ಟು ಆ ಕಡತವನ್ನು ಓದಿಸಿ ಎಂಬುದು ನಮ್ಮ ಮನವಿ.

ಗೊಂದಲ

ಉಪಾಧ್ಯಕ್ಷರು : ಕಡತವನ್ನು ತರಿಸುವುದಕ್ಕೆ ನಾನು ತಯಾರಾಗಿದ್ದೇನೆ. ಕಡತ ಈಗ ನನ್ನ ಮುಂದೆ ಇದೆ. ಇದನ್ನು ಓದಿ ಹೇಳಬೇಕೇ? ಅದಕ್ಕೆ ಅದನ್ನು....

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಎಲ್ಲಾ ಕಡತವನ್ನು ಓದುವುದಕ್ಕೆ ಅದರದ್ದೇ ಆದ ಒಂದು ಸಮಯ ಇರುತ್ತದೆ. ಲಂಚ್ ಆದ ಮೇಲೆ ಓದುವುದು ಅಲ್ಲ. ನಾನು ಅದಕ್ಕೋಸ್ಕರ ಮನವಿ ಮಾಡಿಕೊಂಡೆ, ನೀವು ಸಭೆಯನ್ನು ಮುಂದೂಡುವುದಕ್ಕಿಂತ ಮುಂಚೆ ದಯವಿಟ್ಟು ಕಡತವನ್ನು ತರಿಸಿ ಓದಿಸಿ, ಎಲ್ಲರಿಗೂ ಗೊತ್ತಾಗುತ್ತದೆ ಎಂದು ನಾನು ಮನವಿ ಮಾಡಿಕೊಂಡೆ.

ಉಪಾಧ್ಯಕ್ಷರು : ಕಡತ ತರಿಸುವುದಕ್ಕೆ ಸಮಯ ಬೇಕಲ್ಲಾ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ವರದಿಗಾರರು ಇಲ್ಲೇ ಬರೆದುಕೊಳ್ಳುತ್ತಿದ್ದರು; ಇಂಥ ಸಂದರ್ಭಗಳಲ್ಲಿ ವರದಿಗಾರರ ಟಿಪ್ಪಣಿಯನ್ನು ಸಭೆಯ ಮುಂದೆ ಓದಿಸಿರುವ ಉದಾಹರಣೆಗಳು ಇವೆ,

ಗೊಂದಲ

ಉಪಾಧ್ಯಕ್ಷರು : ಈಗ ಅದಕ್ಕೆ ಹೋಗದೇ ಈಗಾಗಲೇ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು...

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನಾವು XXX ಎಂದು ಅನ್ನಿಸಿಕೊಂಡು ಇಲ್ಲಿ ಕೆಲಸ ಮಾಡಬೇಕೇ?

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಉಪಾಧ್ಯಕ್ಷರು : ಅದಕ್ಕಾಗಿ ಮಾನ್ಯ ಮಂತ್ರಿಗಳಾದ ಶ್ರೀ ಚಂದ್ರೇಗೌಡರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಆ ಸೌಜನ್ಯತೆ ಅವರಿಗೆ ಇಲ್ಲವಲ್ಲಾ.

ಉಪಾಧ್ಯಕ್ಷರು : ಈ ರೀತಿಯಾಗಿ ಇನ್ನು ಮುಂದೆ ಆಗುವುದಿಲ್ಲ, ನಾವು ನೋಡುತ್ತೇವೆಂದೂ ಸಹ ಹೇಳಿದ್ದಾರೆ. ಮತ್ತೆ ಆ ಶಬ್ದಗಳನ್ನು ನಾವು ಕಡತದಿಂದ ತೆಗೆದುಹಾಕಿದ್ದೇವೆ. ಅವರು ಎರಡು ಮೂರು ಸಲ ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಆ ವಿಷಯವನ್ನು ಕೈಬಿಡಬೇಕು. ಮಾನ್ಯ ಹಿರಿಯ ಸಚಿವರೇ, ಮಾತನಾಡಿದ್ದಾರೆ....

ಶ್ರೀ ಜಗದೀಶ್ ಶೆಟ್ಟರ್ : ಆ ಸೌಜನ್ಯ ಅವರಿಗೆ ಇಲ್ಲವಲ್ಲಾ. ಮಾನ್ಯ ಹಿರಿಯ ಸಚಿವರಾದ ಶ್ರೀ ಚಂದ್ರೇಗೌಡರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆ ಸೌಜನ್ಯ ಅವರಿಗೆ ಇಲ್ಲವಲ್ಲಾ. ಅಂದರೆ ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. ನಾವು ಬಿಜೆಪಿ ಶಾಸಕರು XXX ಎಂದು ಅನ್ನಿಸಿಕೊಂಡು ಇಲ್ಲಿ ಕೆಲಸ ಮಾಡಬೇಕೇನು?

ಗೊಂದಲ

ಉಪಾಧ್ಯಕ್ಷರು : ಕಡತದಲ್ಲಿ XXX ಆ ಪ್ರಶ್ನೆ ಉಳಿದಿಲ್ಲ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಅದಾದ ಮೇಲೂ ಮಾನ್ಯ ಸಚಿವರು ಮಾತನಾಡಿದ್ದಾರಲ್ಲಾ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅವರು ಒಬ್ಬ ಕ್ಯಾಬಿನೆಟ್ ಸಚಿವರಾಗಿ ಈ ರೀತಿ ಮಾತನಾಡಿದ್ದಾರೆ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಮತ್ತೂ ಮಾತನಾಡಿ Its and by it ಎಂದು ಹೇಳಿದ್ದಾರೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚಂದ್ರೇಗೌಡರು ಹೇಳಿದ ಮೇಲೂ ಹೇಳಿದ್ದಾರೆ.

ಗೊಂದಲ

ಉಪಾಧ್ಯಕ್ಷರು : ಈಗ ಈ ವಿಷಯವನ್ನು ಇಷ್ಟಕ್ಕೆ ಮುಗಿಸುವುದು ಒಳ್ಳೆಯದು.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ನಾವು ಈಗ ಸುಮಾರು ಎರಡು ಗಂಟೆಯಿಂದ ಚರ್ಚೆ ಮಾಡುತ್ತಿದ್ದೇವೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಚಿವರು ಬಂದಿದ್ದೇ ಈಗ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು ಬಂದಿದ್ದು ಈಗಲೇ ಇರಬಹುದು. ಆದರೆ ನಿಮಗೆ ಯಾವಾಗ ಏನು ಕಾಣುತ್ತದೆಯೋ ನಮಗೆ ಗೊತ್ತಿಲ್ಲ. ಯಾವಾಗ ನಾವು ಇಲ್ಲಿ ಇರುತ್ತೇವೆ, ಯಾವಾಗ ನಾವು ಇಲ್ಲಿ ಇರುವುದಿಲ್ಲ ಆ ವಿಚಾರವಲ್ಲ ನಾನು ಹೇಳುವುದು. ಕಡತ ನೋಡಿ ಎಂದು ಹೇಳುತ್ತೀರಿ, ಕಡತ ತರಿಸಿಕೊಂಡು ಓದಿ ಎಂದು ಹೇಳುತ್ತೀರಿ; ಎಲ್ಲಾ ಹೇಳುತ್ತೀರಿ ಇಲ್ಲಿಯವರೆಗೆ ನೂರು ಸಲ ನೀವು ಹೇಳಿದ್ದೀರಿ, ನೂರು ಸಲ ಅವರು ಹೇಳಿದ್ದಾರೆ. ಇಲ್ಲಿ ಇರುವಂತಹ ವಿಚಾರ ಇಷ್ಟೇ. ಮಾನ್ಯ ಸದಸ್ಯರಾದ ಶ್ರೀ ಆರಗ ಜ್ಞಾನೇಂದ್ರರವರು ಏನು ಮಾತನಾಡಿದ್ದಾರೆ ಅಂದರೆ ಈ XXX ಬಗ್ಗೆ ಏಕೆ ವಿಚಾರ ನಡೆದಿದೆ ಎಂದು ಆಗಿನಿಂದ? ನಾವೂ ಕೇಳುತ್ತಿದ್ದೇವೆ. ನೀವು ಏನು ಹೇಳುತ್ತಿದ್ದೀರಿ ಅಂದರೆ XXX ಒಂದು ಮಗುವನ್ನು ಶಸ್ತ್ರ ಚಿಕಿತ್ಸೆಗಾಗಿ ಇಲ್ಲಿಗೆ ತಂದಿದ್ದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಆರ್ಥಿಕವಾಗಿ ಸಹಾಯ ಮಾಡಿರುವಂತಾದ್ದು, ನನ್ನ ಕ್ಷೇತ್ರದಲ್ಲಿ ಅದೇ ತರಹದ ಒಬ್ಬ ವ್ಯಕ್ತಿ ಬಂದಾಗ ಏಕೆ ಸಹಾಯ ಮಾಡಲಿಲ್ಲ ಎನ್ನುವಂತಹ ಒಂದು ವಿಚಾರ ಪ್ರಸ್ತಾಪವಾಗಿರುವುದನ್ನು ಒಪ್ಪುತ್ತೀರಲ್ಲಾ ಸ್ವಾಮಿ. ಅದಕ್ಕೆ ಮಾನ್ಯ ಸಚಿವರಾದ ಶ್ರೀ ಶಿವಕುಮಾರ್ ರವರು ಏನು ಹೇಳಿದರು ಅಂದರೆ, ಮಾನವೀಯತೆಯ ದೃಷ್ಟಿಯಿಂದಾಗಿ ನಿಮ್ಮ ಸರ್ಕಾರ ಅನುಮತಿ ಕೊಟ್ಟಿದ್ದಂತಹ ಒಂದು ಮಗು ಶಸ್ತ್ರ ಚಿಕಿತ್ಸೆಗೆ ಬಂದಿದ್ದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಮಂತ್ರಿಗಳು ಹಾಗೂ ನಮ್ಮ ವಾರ್ತಾ ಸಚಿವರು ಮಾನವೀಯತೆಯ ದೃಷ್ಟಿಯಿಂದಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 10 ಸಾವಿರ ರೂಪಾಯಿಗಳನ್ನು ಕೊಟ್ಟಿರುವಂತಾದ್ದು. ಆದರೆ ತಾವು ಬಳಸಿರುವಂತಹ ಪದ ಹೇಗಿದೆ ಅಂದರೆ ನಾವು ನಮ್ಮ XXX ಸಹಾಯ ಮಾಡುತ್ತಿದ್ದೇವೆ ಎನ್ನುವ ಧಾಟಿಯಲ್ಲಿತ್ತು.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅವರು ಯಾವ ರೀತಿ ಮಾತನಾಡಿದ್ದಾರೆಂದು ತಾವು ಕಡತ ತೆಗೆದು ನೋಡಿ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ತಾವು ಇಲ್ಲಿ ಇದ್ದೀರಿ. ತಾವು ಹತ್ತಾರು ಸಲ ವಿಚಾರ ಕೇಳಿದ್ದೀರಿ. ನಾನು ಬಹಿರಂಗವಾಗಿ ಹೇಳುತ್ತೇನೆ. ಏನು ವಿಚಾರ ಅಂದರೆ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೇ, ಆ ಪ್ರೊಸೀಡಿಂಗ್ಸ್ ಓದಿ ಬಿಡಿ. ಒಬ್ಬೊಬ್ಬರು ಒಂದೊಂದು ವಿಷಯಗಳನ್ನು ಹೇಳುತ್ತಿದ್ದಾರೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ಉಪಾಧ್ಯಕ್ಷರೇ ನಡೆದಿರುವಂತಹ ವಿಚಾರ ಏನಿದೆ ಎಂದು ತಮಗೆ ಗೊತ್ತಿದೆ. ತಾವೇ ಅಧ್ಯಕ್ಷ ಪೀಠದಲ್ಲಿ ಆಸೀನರಾಗಿದ್ದೀರಿ. ತಾವು ಒಂದು ನಿರ್ಣಯವನ್ನು ಕೊಡುವುದರ ಮುಖಾಂತರ ಈ ವಿಷಯವನ್ನು ಇತ್ಯರ್ಥ ಮಾಡಬಹುದು. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಅನ್ನುತ್ತೀರಿ, ಮಾನ್ಯ ಚಂದ್ರೇಗೌಡರಿಗೆ ಹೇಳಿ ಅನ್ನುತ್ತೀರಿ, ನಮಗೆ ಹೇಳಿ ಅನ್ನುತ್ತೀರಿ, ಯಾರು ದೇಶದ ಶತ್ರು? ಈ ದೇಶದಲ್ಲಿ ಹುಟ್ಟಿರುವಂತಹವನು ಏನಾದರೂ ಈ ದೇಶಕ್ಕೆ ದ್ರೋಹ ಮಾಡಿದರೆ ಅವನಂತೂ ಈ ದೇಶದವನು ಅಲ್ಲ ಎಂದು ಬಹಿರಂಗವಾಗಿ ಹೇಳುವುದಕ್ಕೆ ಅದು ಯಾವ ಜಾತಿ, ಯಾವ ಜನಾಂಗದವರು ಇದ್ದರೂ ಸರಿಯೇ.

ಶ್ರೀ ಜಗದೀಶ್ ಶೆಟ್ಟರ್ : ನಾವು ಅದನ್ನೇ ಹೇಳುತ್ತಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಜೊತೆಗೆ ಇವರು ಹೇಳುತ್ತಾರಲ್ಲಾ ಪಾಕಿಸ್ತಾನವನ್ನು ಸಮರ್ಥಿಸಿಕೊಳ್ಳುವಂತಹ ಯಾರೇ ಆಗಲಿ ಈ ದೇಶದಲ್ಲಿ ವಾಸ ಮಾಡುತ್ತಿದ್ದರೆ ಅವರು ನೂರಕ್ಕೆ ನೂರರಷ್ಟು ಈ XXX

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಗೀರ್ ಅಹಮದ್ ರವರು ನಮ್ಮ ವಕ್ತಾರರು. ಸಗೀರ್ ಅಹಮದ್ ರವರು ನಮ್ಮ ವಕೀಲರು. ಮಾನ್ಯ ಸಗೀರ್ ಅಹಮದ್ ರವರು ಹೇಳುತ್ತಿರುವುದನ್ನು ನಾವು ಪೂರ್ತಿ ಒಪ್ಪುತ್ತೇವೆ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ನಿಮ್ಮ ನೆಂಟಸ್ಥಿಕೆ ಎಷ್ಟು ಇದೆ ಎನ್ನುವುದು ನನಗೂ ಗೊತ್ತಿದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಆಗಲೇ ಅವರು ಸರಿಯಾದ ಮಾತನ್ನು ಹೇಳಿದರು.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಹಾಗಾದರೆ ನಿಮ್ಮ ಅಭಿಪ್ರಾಯದಲ್ಲಿ ಶ್ರೀ ಶಿವಕುಮಾರ್ ಅವರು ಅಂತಹವರು ಎಂದು ನನಗೆ ಶಹಬಾಷ್ ಗಿರಿ ಕೊಡುತ್ತೀರಾ?

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಒಂದು ಶ್ರೀ ಜ್ಞಾನೇಂದ್ರ ಅವರು ಮಾಡಿದ್ದು ಒಂದು ತಪ್ಪು ಅಂದರೆ ಸಗೀರ್ ಅಹಮದ್‌ರವರು ಯಾವ ಧಾಟಿಯಲ್ಲಿ ಹೇಳಿದರು, ಆ ಧಾಟಿಯಲ್ಲಿ ಅವರು ಹೇಳಲಿಲ್ಲ. ಹೇಳಿದ್ದರೆ ಚೆನ್ನಾಗಿರುತ್ತಿತ್ತು.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದೇ ಧಾಟಿಯಲ್ಲಿ ನಾನು ಹೇಳುತ್ತೇನೆ ಸ್ವಾಮಿ, ದಯಮಾಡಿ ಕೇಳಿ. ನಾನು ಏನು ಹೇಳುತ್ತಿದ್ದೇನೆ ಅಂದರೆ, ಆ ಮಗುವಿಗೆ ಶಸ್ತ್ರಚಿಕಿತ್ಸೆಗೆ ಇಲ್ಲಿಗೆ ತರುವುದರ ಬಗ್ಗೆ ರಾಜ್ಯ ಸರ್ಕಾರವೇ ಆಗಲಿ ಅಥವಾ ಶ್ರೀ ಡಿ.ಕೆ. ಶಿವಕುಮಾರ್ ಆಗಲಿ ಅನುಮತಿ ಕೊಟ್ಟಿಲ್ಲ. ನಿಮ್ಮ ಸರ್ಕಾರ, ನೀವು ನೆಂಟಸ್ಥಿಕೆಯನ್ನು ಬೆಳೆಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದವರು ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿದ್ದಾರೆ. ಈಗ ನೀವು ಹೇಳಿದಿರಿ, ನಾವು ಅದು ಮಾಡುವುದಕ್ಕೆ ಇಷ್ಟಪಡುತ್ತಿದ್ದೇವೆ, ನಾವು ಇದು ಮಾಡುವುದಕ್ಕೆ ಇಷ್ಟಪಡುತ್ತಿದ್ದೇವೆ ಎಂದು. ಯಾರು ಸ್ವಾಮಿ ಅದಕ್ಕೆ ವಿರುದ್ಧವಾಗಿ ಹೋಗಿದ್ದಾರೆ? ನಾವು ಈ ದೇಶದಲ್ಲಿ ಬಾಳಿ, ಬದುಕಿ ಸಾಯುವವರೆಗೆ ದೇಶದ ಮಣ್ಣಾಗಿ ಬೆಳೆಯುತ್ತೇವೆ. ಆದರೆ ನೀವು ಹೇಳುತ್ತೀರಲ್ಲಾ ಅದಕ್ಕೆ ನಾವೇ ಹಾಗೆ ನಾವೇ ಹೀಗೆ ಎಂದು ಅದಲ್ಲ, ನೀವೇ ದೇಶಭಕ್ತರಲ್ಲ. ನಮಗೂ ದೇಶಭಕ್ತಿ ಬಗ್ಗೆ ಅರಿವು ಇದೆ. ಆದರೆ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಯಾರೂ ಡ್ಯೂಟಿ ಕಾನ್‌ಷಿಯಸ್ ಆಗುವುದು ಬೇಡ. ಯಾರಿಗೂ ತಪ್ಪಿತಸ್ಥ ಮನೋಭಾವನೆ ಬೇಡ. ಅವರು ಯಾವ ರೀತಿ ಹೇಳಿದರೋ ಆ ರೀತಿ ತೆಗೆದುಕೊಳ್ಳಿ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನೀವೂ ಅವರು ಮಾತನಾಡುವಂತಾದ್ದು ಬೇರೆ ದೇಶದ್ದೇ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ನಾವು ಮತ್ತು ಮಾನ್ಯ ಅರಗ ಜ್ಞಾನೇಂದ್ರರವರು ಮಾತನಾಡಿರುವಂತಾದ್ದರ ಬಗ್ಗೆ ಮಾನ್ಯ ಶಿವಕುಮಾರ್‌ರವರ ಮನಸ್ಸಿಗೆ ನೋವಾಗಿದೆ. ಏನು ನೋವಾಗಿದೆ? ಆ ಮಗುವಿಗೆ ನೀವು ನೀಡಿದಂತಹ ಸಹಾಯದಿಂದಾಗಿ ಆ xxx ಮಗುವಿಗೆ ನೀಡಿರುವಂತಹ ಸಹಾಯ ಸರಿಯೇ ಎನ್ನುವುದರ ಬಗ್ಗೆ ಅವರು ಆಡಿರುವಂತಹ ಮಾತಿಗೆ ಅವರಿಗೆ ನೋವಾಗಿದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನೋಡಿ, ಮಾನ್ಯ ಸಗೀರ್ ಅಹಮದ್‌ರವರು ಬ್ಯಾಡ್ ಇಂಪ್ರೆಷನ್ ಬರುವ ಹಾಗೆ ಮಾತನಾಡುತ್ತಿದ್ದಾರೆ. ಅವರು ಆ ಮಗುವಿನ ಬಗ್ಗೆ ಮಾತನಾಡಿಯೇ ಇಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನೀವು ಇನ್ನು ಯಾವುದರ ಬಗ್ಗೆ ಮಾತನಾಡಿದಿರಿ?

ಶ್ರೀ ಜಗದೀಶ್ ಶೆಟ್ಟರ್ : ಅವರು ಆ ಮಗುವಿನ ಬಗ್ಗೆ ಮಾತನಾಡಿಲ್ಲ. ಅವರು xxx ಎಂದು ಏಕೆ ಅಂದರು? ಹಾಗಾದರೆ ಅವರು xxx ?

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನೀವು ಆಡಿರುವಂತಹ ಮಾತುಗಳಿಂದ ಅವರಿಗೆ ನೋವಾಗಿದೆ. ಈಗಲೂ ನಾನು ಹೇಳುತ್ತೇನೆ. ನೀವು ಅಂದರೆ ಮಾನ್ಯ ಜ್ಞಾನೇಂದ್ರರವರು ಆಡಿರುವಂತಹ ಮಾತು ಏನಿದೆ ಅದರಿಂದ ಅವರಿಗೆ ನೋವಾಗಿದೆ. ನೀವು ಹೇಳಿದಂತಹ ಮಾತಿಗೆ ವಿರುದ್ಧವಾಗಿ ಅವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ XXX ಎಂದು ಹೇಳಬೇಕಾಗಿತ್ತೇ? ಹಾಗಾದರೆ ಬಿಜೆಪಿ ಶಾಸಕರು XXX

ಶ್ರೀ ಸಿ.ಆರ್. ಸಗೀರ್ ಅಹಮದ್ : ನೀವು ಹೇಳಿದ್ದಕ್ಕೆ ಅವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಏನು ಹೇಳುತ್ತಿದ್ದೀರಿ ಸಗೀರ್ ಅಹಮದ್‌ರವರೇ, ಹಾಗಾದರೆ ನಾವು XXX ? XXX ಎಂದು ಅನಿಸಿಕೊಂಡು ನಾವು ಇಲ್ಲಿ ಕೆಲಸ ಮಾಡಬೇಕೇ? ತಾವು ಅವರನ್ನು ಯಾವ ರೀತಿ ಡಿಫೆಂಡ್ ಮಾಡುತ್ತಿದ್ದೀರಿ. XXX ಎಂದು ಅನ್ನಿಸಿಕೊಂಡು ನಾವು ಇಲ್ಲಿ ಇರಬೇಕೇ? ನಾವು ಹೇಳಿದ್ದಕ್ಕೆ ಅವರು ಆ ರೀತಿ ಹೇಳುತ್ತಾರೆಯೇ? ಅದನ್ನು ನೀವು ಡಿಫೆಂಡ್ ಮಾಡುತ್ತೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈಗ ಹೇಳಿದರು. ನೀವು ಆಡಿರುವಂತಹ ಮಾತು ಆಕಸ್ಮಿಕವಾಗಿ ತಪ್ಪಾಗಿದ್ದರೆ, ನೀವು ಕ್ಷಮಾಪಣೆ ಕೇಳುವುದಾದರೆ ಅವರೂ ಕೇಳುತ್ತಾರೆ. ಇಲ್ಲಿಗೆ ಮುಕ್ತಾಯ ಮಾಡೋಣ ಎಂದು ಒಂದು ತೀರ್ಮಾನ ಆಗಿದೆ. ಎರಡನೆಯದು, ಕಡತದಲ್ಲಿ ಹೋಗಿರುವಂತಹ ಈ ಪದಗಳನ್ನು ತೆಗೆದು ಹಾಕುವುದರ ಬಗ್ಗೆ ಆಗಲೇ ಮಾನ್ಯ ಉಪಾಧ್ಯಕ್ಷರು ನಿರ್ಣಯ ಮಾಡಿದ್ದಾರೆ. ಪದೇ ಪದೇ ಆ ವಿಚಾರವನ್ನು ನೀವು ಅದೇ ತರಹ ಮಾತನಾಡಿದರೆ ಹೇಗೆ?

4.40 ಪಿ ಎಂ

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಅವರು ಕೇಳಲಿ, ನಾನೂ ಕೇಳುತ್ತೇನೆಂದು ಹೇಳುತ್ತಿದ್ದಾರಲ್ಲಾ. ಅಲ್ಲಿಗೆ ಮುಗಿದೇ ಹೋಗುತ್ತದಲ್ಲಾ.

ಗೊಂದಲ

ಉಪಾಧ್ಯಕ್ಷರು : ಈಗ ವಾತಾವರಣ ತಿಳಿಯಾಗಬೇಕು, ಸದನ ನಡೆಯಬೇಕು.

ಶ್ರೀ ಜಗದೀಶ್ ಶೆಟ್ಟರ್ : XXX ಎಂದು ಅನ್ನಿಸಿಕೊಂಡು ನಾವಿಲ್ಲಿ ಕೆಲಸ ಮಾಡಬೇಕೇ?

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ನಾನು ತಮಗೆ ಆಗಲೇ ಹೇಳಿದೆ. ತಾವು ಅದನ್ನು ಓದಿ, ಎಲ್ಲರಿಗೂ ಮತ್ತೊಮ್ಮೆ ಗೊತ್ತಾಗಲಿ. ನಾವು ಯಾವ ಅರ್ಥದಲ್ಲಿ ಹೇಳಿದ್ದೇವೆಂಬುದು ಗೊತ್ತಾಗಲಿ. ಸುಮ್ಮಸುಮ್ಮನೆ ಇಲ್ಲಿ ಇಂಟರ್‌ಪ್ರಿಟೇಷನ್ ಮಾಡಿ ಬೇರೆ ಬೇರೆ ರೀತಿಯಿಂದ ಹೇಳುವುದು ಬೇಡ.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ನಮ್ಮ ರಸ್ತೆ ಬದಿಯಲ್ಲಿ ಚಿನ್ನಿದಾಂಡು ಆಡುವ ಸಣ್ಣಮಕ್ಕಳೂ ಕೂಡ ಈ ರೀತಿ ಜಗಳ ಆಡಿಕೊಂಡು, ಈ ರೀತಿ ಇಂಟರ್‌ಪ್ರಿಟೇಷನ್ ಮಾಡಿಕೊಂಡು ಹೋಗುವುದಿಲ್ಲ. ನಾವು ಅದಕ್ಕಿಂತ ಕೀಳಾಗಿ ಇಲ್ಲಿ ಮಾತನಾಡುತ್ತಿದ್ದೇವೆ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಪಾಕಿಸ್ತಾನ XXX ಎಂದು ಇಲ್ಲ, ಮಾನ್ಯ ಸಗೀರ್ ಅಹಮದ್‌ರವರು ಹೇಳಿದರು. ಇಲ್ಲಿ ಅನ್ನ ತಿನ್ನುವವರೆಲ್ಲಾ, ಪಾಕಿಸ್ತಾನದ ಬಗ್ಗೆ ಹೇಳಿಬಿಟ್ಟರೆ ಅವರು XXX ಎಂದು ಏನು ಕಠಿಣವಾಗಿ ಹೇಳಿದರು. ನಾನು ಆ ರೀತಿಯೂ ಹೇಳಲಿಲ್ಲ. ಆ ದಿಕ್ಕಿನಿಂದ ಬಂದಂಥ ಮನವಿಗೆ ಸರ್ಕಾರ ಕೊಟ್ಟಂಥ ಹಾನರ್ ಏನಿದೆ, ಅದನ್ನು ನಾನು ಅಪ್ರೀಷಿಯೇಟ್ ಮಾಡಿದ್ದೇನೆ. ಸರ್ಕಾರ ನಮ್ಮ ಸಂಸ್ಕೃತಿಯನ್ನು ಪ್ರದರ್ಶನ ಮಾಡಿದೆ, ದೊಡ್ಡ ಹೃದಯವಂತಿಕೆಯನ್ನು ತೋರಿಸಿದೆ ಎಂದು ಹೇಳಿದ್ದೇನೆ. ನನ್ನ ಕ್ಷೇತ್ರದ ಒಬ್ಬ ವ್ಯಕ್ತಿ ಕಳೆದ 25 ವರ್ಷಗಳಿಂದ ಬೆಂಕಿ ನಾಲಗೆಯಲ್ಲಿದ್ದು ಹೊರಬಂದಥವರಿಗೆ ಸಹಾಯ ಮಾಡಿ ಎಂದು ಹೇಳಿದರೆ, ಇವರು ಏನೇನೋ ಹೇಳುವುದಕ್ಕೆ ಹೊರಟಿದ್ದಾರೆ. ನನಗೆ ಅನುಮಾನ ಬರುತ್ತಾ ಇದೆ. ಒಬ್ಬ ಸದಸ್ಯರು XXX ಎಂದು ಹೇಳಿದಾಗ ಮಂತ್ರಿಗಳು ಈ ರೀತಿ ಉರಿದಿದ್ದು ನೋಡಿದರೆ ಇವತ್ತು ಅನುಮಾನಗಳು ಬರುತ್ತಾ ಇದೆ. ಕರ್ನಾಟಕ ರಾಜ್ಯದ ಒಬ್ಬ ಮಂತ್ರಿ ಈ ರೀತಿ ಮಾತನಾಡುತ್ತಾರೆಂದರೆ,

ಗೊಂದಲ

ಉಪಾಧ್ಯಕ್ಷರು : ಏನೇ ಇರಲಿ, ಸದನದಲ್ಲಿ ಈ ರೀತಿ ಆಗಬಾರದಾಗಿತ್ತು, ಆಗಿದೆ. ಅದಕ್ಕೆ ಈ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕೆಂಬ ಉದ್ದೇಶದಿಂದ, ತಾವೆಲ್ಲಾ ನನಗೆ ಸಹಕಾರ ಮಾಡಿದರೆ, ಅದು ಮುಗಿಯುತ್ತದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೇ, ಈ ಒಂದು ವಿವಾದ ಸುಮಾರು ಎರಡು ಗಂಟೆಗಳ ಕಾಲ ಸದನದ ವೇಳೆಯನ್ನು ತೆಗೆದುಕೊಂಡಿದೆ. ಸದನದಲ್ಲಿ ಕೆಲವು ವಿಚಾರಗಳಲ್ಲಿ ವಿವಾದ ಬರತಕ್ಕಂಥಾದ್ದು ಸಹಜ. ಆದರೆ, ಆ ವಿವಾದವನ್ನು ಯಾವರೀತಿ ಇತ್ಯರ್ಥ ಮಾಡಿಕೊಳ್ಳುತ್ತೇವೆ, ಯಾವ ಒಂದು ವಾತಾವರಣದಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತೇವೆ, ಇದು ಬಹಳ ಮುಖ್ಯ. ಹಿಂದಿನ ಸರ್ಕಾರದಲ್ಲಿ ಇದೇ ಪರಿಸ್ಥಿತಿ, ನಾನು ಮಂತ್ರಿಯಾಗಿದ್ದಾಗ ಸ್ಪೀಕರ್ ರವರಿಗೂ ನನಗೂ ಒಂದು ವಿಚಾರ ಬಂತು. ಒಂದು ವಿಚಾರ ತೆಗೆದುಕೊಂಡಾಗ ಇದು ಹಕ್ಕುಚ್ಯುತಿಗೆ ಬರುತ್ತದೋ ಇಲ್ಲವೋ. ನಾನು ಕೂಡ ಶ್ರೀ ಶಿವಕುಮಾರ್‌ರವರ ರೀತಿಯಲ್ಲಿ ಹಠ ಹಿಡಿದೆ. ತಾವು ಆ ಸ್ಥಾನದಲ್ಲಿ ಕುಳಿತುಕೊಂಡು, ಇದು ಹಕ್ಕುಚ್ಯುತಿಗೆ ಬರುತ್ತದೋ ಇಲ್ಲವೋ ಎಂದು ತೀರ್ಪು ಕೊಡಬೇಕು, ತಾವು ತೀರ್ಪು ಕೊಡದೇ ನಾನು ಕುಳಿತುಕೊಳ್ಳುವುದಿಲ್ಲವೆಂದು ನಾನು ಹಠ ಹಿಡಿದೆ. ಆಗ ವಿರೋಧ ಪಕ್ಷದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದರು, ಖರ್ಗೆಯವರು ಇದ್ದರು, ಘೋರ್ಪಡೆಯವರು

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಇದ್ದರು, ಮೊಯ್ಲಿಯವರು ಇದ್ದರು. ಅವರನ್ನೆಲ್ಲಾ ಸ್ಪೀಕರ್‌ರವರೇ ಕೇಳಿದರು. ಸೋಮಶೇಖರ್‌ರವರು ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಕೇಳಿದರು. ಆಗ, ಅವರೆಲ್ಲರೂ ಎದ್ದು, ಮಾನ್ಯ ಸೋಮಶೇಖರ್ ರವರು ಹೇಳಿದಹಾಗೆ ಇದು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ನನ್ನ ಪರವಾಗಿ ಹೇಳಿದರು. ಆಗ ತೀರ್ಪು ಕೊಟ್ಟರು. ಅಂತಹ ಸಂದರ್ಭದಲ್ಲಿ ನಾನು ಒಂದು ಪ್ರಿನ್ಸಿಪಲ್ಸ್ ಇಟ್ಟು, ಹಠ ಹಿಡಿದುಕೊಂಡು ಕುಳಿತುಕೊಂಡೆ ಅದು righteous indignation. ನಾನು ಹೇಳಿದೆ, ಇಲ್ಲಿ ನಾನು ಮುಖ್ಯ ಅಲ್ಲ, ನಾನು ತೆಗೆದುಕೊಂಡಂತಹ ನಿಲುವು ಬಹಳ ಮುಖ್ಯ. ಈ ಸದನದಲ್ಲಿ ನಾನು ಶಾಶ್ವತ ಅಲ್ಲ, ನಾವು ಯಾವ ಒಂದು ವಿಚಾರವನ್ನು ಎತ್ತುತ್ತೇವೆ, ಯಾವ ನಿಲುವು ತೆಗೆದುಕೊಳ್ಳುತ್ತೇವೆ, ಅದು ಶಾಶ್ವತವಾಗಿ ಉಳಿಯುತ್ತದೆ. ಆ ದೃಷ್ಟಿಯಿಂದ ನಾನು ಕಾಂಪ್ರಮೈಸ್ ಆಗುವುದಿಲ್ಲವೆಂಬುದು ಬಂದಾಗ ಸ್ವಲ್ಪಮಟ್ಟಿಗೆ ಗೊಂದಲವಾದಾಗ, ಮುಖ್ಯಮಂತ್ರಿಗಳು ಎದ್ದು ಯಾವುದೋ ಒಂದು ರೀತಿಯಲ್ಲಿ ಇತ್ಯರ್ಥ ಮಾಡಿದರು. ಈಗ ನಾನು ಹೇಳತಕ್ಕಂಥಾದ್ದು ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳೂ ಸುಮಾರು ಒಂದು ಗಂಟೆಯಿಂದ ಕೇಳುತ್ತಾ ಇದ್ದಾರೆ. ಮಾನ್ಯ ಅರಗ ಜ್ಞಾನೇಂದ್ರ ಅವರು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದಾರೆ, ಅದನ್ನು ತಾವು ನೋಡಿ. ಉದ್ದೇಶಪೂರ್ವಕವಾಗಿ ಯಾರನ್ನಾದರೂ ಅವಮಾನ ಮಾಡಬೇಕೆಂದು ಹೇಳಿದ್ದಾರೆ, ಖಂಡಿತವಾಗಿಯೂ ವಾಪಸ್ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಇಲ್ಲಿ ಮಾತನಾಡುವಾಗ ಆವೇಶದಲ್ಲಿ, ಬಾಯಿತಪ್ಪಿ, ಯಾವುದಾದರೂ ವಿಚಾರಗಳು ಬಂದೇ ಬರುತ್ತವೆ. ಬಹಳ ಎಚ್ಚರಿಕೆಯಿಂದ ಮಾತನಾಡುತ್ತೇವೆಂದು ನಾವು ಯಾರೂ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಆದರೆ, ಅದನ್ನು ನಾವು ಪ್ರಿಸ್ಟೀಜ್ ಆಗಿ ಇಟ್ಟುಕೊಳ್ಳುತಕ್ಕಂಥಾದ್ದು ಸೂಕ್ತವಲ್ಲ. ಮನುಷ್ಯ ಮೇಲಕ್ಕೆ ಯಾವಾಗ ಹೋಗುತ್ತಾನೆಂದು ಹೇಳಿದರೆ, ತನ್ನ ತಪ್ಪುಗಳನ್ನು ತಿದ್ದಿಕೊಂಡು ಹೋದಾಗಲೇ ಮೇಲಕ್ಕೆ ಹೋಗುತ್ತಿರುತ್ತಾನೆ. ಆದರೆ, ತಾನು ಮಾಡುವ ತಪ್ಪುಗಳನ್ನೂ ಸರಿ ಎಂದು ಹೇಳತಕ್ಕಂಥವನು ಯಾವಾಗಲೂ ದೊಡ್ಡ ಮನುಷ್ಯನಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ನಾನು, ಮಾನ್ಯ ಚಂದ್ರೇಗೌಡರನ್ನು ಬಹಳ ಮೆಚ್ಚುತ್ತೇನೆ, ಅವರು ಸುಸಂಸ್ಕೃತ ಮಂತ್ರಿಗಳು. ಅವರಿಗೆ ಉಭಯ ಸದನಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕೂಡ ಕೆಲಸ ಮಾಡಿ ಅನುಭವ ಇದೆ. ಅವರು ಸರ್ಕಾರದ ಪರವಾಗಿ ದೊಡ್ಡತನವನ್ನು ತೋರಿಸಿದ್ದಾರೆ.

ಮಾನ್ಯ ಶಿವಕುಮಾರ್‌ರವರು ಉದ್ದೇಶ ಪೂರ್ವಕವಾಗಿ ಹೇಳದೇ ಇರಬಹುದು. ಏನೋ ಅಚಾತುರ್ಯವಾಗಿ ಬಂದಿದೆ, ಉದ್ದೇಶಪೂರ್ವಕವಾಗಿ ಬಂದಿಲ್ಲ, ಒಂದುವೇಳೆ ಆ ರೀತಿ ಬಂದಿದ್ದರೆ, ಉದ್ದೇಶಪೂರ್ವಕವಾಗಿ ಬಂದಿಲ್ಲ, ಅದಕ್ಕಾಗಿ ನಾನು ವಿಷಾದ ಮಾಡುತ್ತೇನೆಂದು ಹೇಳಿಬಿಟ್ಟಿದ್ದರೆ, ಇಷ್ಟೆಲ್ಲಾ ಆಗುತ್ತಲೇ ಇರಲಿಲ್ಲ. ಇದರಿಂದ ತಾವು ದೊಡ್ಡ ಮನುಷ್ಯರಾಗುತ್ತಿದ್ದಿರಿ. ಆದರೆ, ಇದನ್ನು

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಇಷ್ಟೊಂದು ಬೆಳೆಸಿ, 2-3 ಗಂಟೆಗಳ ಕಾಲ ವ್ಯಯ ಮಾಡುವಂಥಾದ್ದು ಸರಿಯಲ್ಲ. ಇಷ್ಟೆಲ್ಲಾ ವಾದ ವಿವಾದ ನಡೆಯುತ್ತಿದೆ, ಜನ ನೋಡುತ್ತಿದ್ದಾರೆ. ಇಷ್ಟೊಂದು ಕಾಲ ವ್ಯಯ ಮಾಡುತ್ತಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತು, ಇದನ್ನು ಶಮನ ಮಾಡದೇ ಇದ್ದರೆ ಆಗುವುದಿಲ್ಲ. ಈ ರೀತಿ ವೇಳೆ ಕಳೆಯುವುದು ಸರಿಯಲ್ಲ. ಇನ್ನೂ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಇದರಲ್ಲಿ ಏನಾಗಿದೆ, ಇದು ಒಬ್ಬ ಶಾಸಕರ ಗೌರವದ ಪ್ರಶ್ನೆ. ಇದು ಅವರೊಬ್ಬರಿಗೇ ಅಲ್ಲ, ಯಾರಿಗೇ ಆದರೂ, ಗೌರವದ ಪ್ರಶ್ನೆಯಾಗುತ್ತದೆ. XXX ಎಂಬ ಶಬ್ದ ಬಂದಾಗ ನೋವಾಗುತ್ತದೆ.

ಗೊಂದಲ

ಉಪಾಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರ್‌ರವರು ಈ ಒಂದು ವಿವಾದಕ್ಕೆ ತೆರೆ ಎಳೆಯುವವರಿದ್ದಾರೆ. ಅವರು ಮಾತನಾಡಿ ಮುಗಿಸುತ್ತಾರೆ, ಎಲ್ಲರೂ ಸುಮ್ಮನೇ ಇರಿ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈಗೇನು ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಸೋಮಶೇಖರ್ ರವರು ಹೇಳಿದ್ದಾರೆ, ಅವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರ ನಿಷ್ಠೆ, ಅವರ ಪ್ರಾಮಾಣಿಕತೆ ಅವರು ಇದೇ ಜಾಗದಲ್ಲಿ ಕುಳಿತುಕೊಂಡು, ಅವರದೇ ಆದಂಥ ಮಾತು, ಅವರಿಗೆ ಕಾಪಿಯಿಂಗ್ ವಿಚಾರದಲ್ಲಿ ಆದಂಥ ಹ್ಯುಮಿಲೇಷನ್, ಅವರು ತೆಗೆದುಕೊಂಡಂಥ ದೃಢ ನಿರ್ಧಾರ, ಅವರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು ಪೋರ್ಟ್ ಪೋಲಿಯೋ ಬದಲಾವಣೆ ಮಾಡಿಕೊಡುವ ಒಂದು ಸಂದರ್ಭದಲ್ಲಿ ಅವರು ತೆಗೆದುಕೊಂಡಂಥ ನಿರ್ಧಾರ, ನಾನು ಕ್ಲೀನ್ ಆಗುವವರೆಗೂ ಮಂತ್ರಿಯಾಗಿ ವಾಪಸ್ ಈ ಸದನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದನ್ನು ನಾನು ಬಹಳ ಹತ್ತಿರದಿಂದ ನೋಡಿ, ಒಪ್ಪಿದ್ದೇನೆ. ಅದೇರೀತಿ ನಾನೂ ಕೂಡ, ಇದು ನನ್ನ ಸ್ವಾಭಿಮಾನದ ಪ್ರಶ್ನೆ ಅಲ್ಲ. ನಾವು ಯಾವ ಸಿದ್ಧಾಂತದಲ್ಲಿ ಇದ್ದೇವೆ, ಯಾವ ತತ್ವದಲ್ಲಿ ಇದ್ದೇವೆ, ಯಾವ ನೀತಿಯಲ್ಲಿದ್ದೇವೆ, ಎನ್ನುವುದು ಬಹಳ ಮುಖ್ಯ ಈ ದೇಶದ ಐಕ್ಯತೆ, ಈ ದೇಶದ ಸಮಗ್ರತೆ, ಈ ದೇಶಕ್ಕೋಸ್ಕರ ಶಾಂತಿ ಕಾಪಾಡಲು ಏನು ಒಂದು ಪಕ್ಷ ಹುಟ್ಟಿದೆ, ಆ ಪಕ್ಷದ ಸದಸ್ಯನಾಗಿದ್ದೇನೆ. ಆ ಪಕ್ಷ ತೆಗೆದುಕೊಂಡ, ಆ ಸರ್ಕಾರ ತೆಗೆದುಕೊಂಡ ತೀರ್ಮಾನ, ಅದರ ಆಕ್ಟ್ ಬಗ್ಗೆ ಆದಂಥ ಒಂದು ಪ್ರಶಂಸೆಯ ಮಾತುಗಳನ್ನು ನಾವು ಕೇಳುತ್ತಾ ಇದ್ದೇವೆ. ಈ ರೀತಿ ಕೇಳುವುದರ ಜೊತೆಗೆ XXX ಎಂಬ ಪದ ಬಂದುದಕ್ಕೆ ನಾನು ಆ ಸಂದರ್ಭದಲ್ಲಿ XXX ಎನ್ನುವುದಾದರೆ ನೀವು XXX ಗಳು ಎನ್ನುವ ಪದವನ್ನು ಹೇಳಿದ್ದು ಸತ್ಯ.

ನಾವೇನೂ ಬಹಳ ದೊಡ್ಡವನು ಅಲ್ಲ. ಮಾನ್ಯ ಚಂದ್ರೇಗೌಡರು ಈ ವಿಚಾರದಲ್ಲಿ ಸರ್ಕಾರದ ಪರವಾಗಿ ನಿಂತುಕೊಂಡು ಮಾತನಾಡುವಾಗ, ಅವರು ಕ್ಷಮಾಪಣೆ ಕೇಳುವಾಗ ನಾನು ಸುಮ್ಮನೇ ಕುಳಿತುಕೊಂಡೆ. ಆಗ ನಮ್ಮ ಸ್ನೇಹಿತರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬಹುದಾಗಿತ್ತು.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಸರಕಾರದ ಒಬ್ಬ ಜವಾಬ್ದಾರಿಯುತ ಸಂಸದೀಯ ಮತ್ತು ಕಾನೂನು ಮಂತ್ರಿಗಳು ಹೀಗೆ ಹೇಳಿದಾಗ ಮಾನ್ಯ ಸದಸ್ಯರುಗಳು ಹೋಗಿ ಕುಳಿತುಕೊಳ್ಳುವ ಕೆಲಸವನ್ನು ಮಾಡಲಿಲ್ಲ. ಅವರು They stood by it. When they stood by it, then I also stood by it. ಸರಕಾರದ ಪರವಾಗಿ ಮಾನ್ಯ ಸಚಿವರು ಹೇಳಿದ್ದನ್ನು ಅವರು ಕೇಳಿದ್ದರೆ, ಒಪ್ಪಬಹುದಾದ ವಿಚಾರವಾಗುತ್ತಾ ಇತ್ತು. ಹೌದು, ನಾನು ಇಲ್ಲಿ ಯಾವ ದೊಡ್ಡವನೂ ಅಲ್ಲ, ನಾನು ಸಮಾಜಕ್ಕೂ ದೊಡ್ಡವನು ಅಲ್ಲ. ಹತ್ತು ಜನರ ಮಧ್ಯೆ ನಾನೇನು ದೊಡ್ಡವನಲ್ಲ. ನಾನು ಪ್ರತಿಯೊಂದು ಹಂತದಲ್ಲಿಯೂ ಕೂಡ ತಲೆಬಾಗಿಸಿ, ಬಗ್ಗಿಕೊಂಡು ಬಂದವನು. ಆದರೆ ನಮ್ಮ ಮೂಲ ಸಿದ್ಧಾಂತವೇನಿದೆಯಲ್ಲಾ ಮೂಲ ತತ್ವ. ಮೂಲ ನಿಷ್ಠೆ. ಅದನ್ನು ನಾನಾಗಲೀ, ಯಾರೇ ಆಗಲಿ ಬಿಡಲು ಸಾಧ್ಯವಿಲ್ಲ. ಹಾಗೆ ಬಿಟ್ಟರೆ ಬಿಟ್ಟವರು ಸತ್ತರು ಎಂದರ್ಥ. ಹಾಗೆಯೇ ನಾನು ನನ್ನದೇ ಆದ ಸಿದ್ಧಾಂತಗಳು ಮತ್ತು ತತ್ವಗಳ ಮೇಲೆ ಬದುಕಿದ್ದೇನೆ. ಜನರ ಸೇವೆ ಮಾಡುತ್ತಾ ಇದ್ದೇನೆ. ನಾನು ಏನು ನಿಲುವು ತೆಗೆದುಕೊಂಡರೂ ಅದು ನನ್ನ ಪಕ್ಷದ ಪರವಾಗಿರುತ್ತದೆ. ನನ್ನ ಸರಕಾರವು ಮಾಡಿದಂಥ ಒಳ್ಳೆಯ ಕೆಲಸಗಳನ್ನು ಮೆಚ್ಚುವ ಬದಲು ಚುಚ್ಚಿ, XXX ಕೆಲಸಕ್ಕೆ, ಇವರು XXX ಬೆಂಬಲ ಕೊಡುತ್ತಾ ಇದ್ದಾರೆ ಎಂಬ ಒಂದು ಪದ ಬಂದುದಕ್ಕೆ ಮಾತ್ರ ನನ್ನ ಭಾವನೆ ಕೆರಳಿದೆಯೇ ಹೊರತು, ಬೇರೆ ಏನೂ ಇಲ್ಲ. XXX ಏಜೆಂಟ್ ಮುಂತಾಗಿ ಅವರು ಹೇಳಿದ್ದಾರೆ ಮತ್ತು ಕ್ಷಮಾಪಣೆ ಕೇಳಿದ್ದಾರೆ. ಅದು ಬೇರೆ ವಿಚಾರ. ಅದೇನೋ ಮಾತುಗಳು ಬಂದುವು. ಪಕ್ಕದಲ್ಲಿ ಪ್ರೆಸ್‌ನವರು ಇದ್ದರು, ವಿಶ್ವೇಶ್ವರ ಹೆಗಡೆಯವರು ಇದ್ದರು, ಪಕ್ಕದಲ್ಲಿ ರಾಮದಾಸ್ ರವರು ಇದ್ದರು. ಅಂದರು... ಇರಲಿ, XXXX ಏನಿದ್ದರೂ ಚುನಾವಣೆಗಳು ಬರುತ್ತವೆ, ಆಗ ಬ್ಯಾಲೆಟ್ ಅತವಾ ಬುಲೆಟ್ ಸ್ಟ್ರಾಂಗ್ ಆಗುತ್ತದೋ ಎಂಬುದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಆಗ ತಿರ್ಮಾನ ಮಾಡೋಣ. ಆದರೆ ಇಲ್ಲಿ ನಾನು ಹಿಂದೆಯೂ ಹೇಳಿದಂತೆ ತಮ್ಮ ತೀರ್ಪಿಗೆ ನಾನು ಬದ್ಧನಾಗಿದ್ದೇನೆ. ನಮ್ಮ ಮುಖಂಡರುಗಳು ಏನು ಹೇಳಿದ್ದಾರೆ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಅದನ್ನು ಬಿಟ್ಟು ನಮ್ಮದೂ ಸ್ವಾಭಿಮಾನ ಅಂದರೆ ಖಂಡಿತವಾಗಿ ಯಾರು ಸೋಲಲು ಹೋಗುತ್ತಾರೆ? ಸ್ವಾಭಿಮಾನ ಕಳೆದುಕೊಂಡು ಯಾರು ಬದುಕುತ್ತಾರೆ ಹೇಳಿ? ಇವೊತ್ತು ಅಧಿಕಾರ ಇರುತ್ತದೆ, ನಾಳೆ ಹೋಗುತ್ತದೆ. ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ, ಆದುದರಿಂದ ನಮ್ಮ ಸಿದ್ಧಾಂತವನ್ನು ಬಿಡುವಂಥ ಪ್ರಶ್ನೆಯೇ ಇಲ್ಲ. ಆದ್ದರಿಂದ ತಾವುಗಳು ಏನು ಹೇಳುತ್ತೀರಿ, ಆ ತೀರ್ಪಿಗೆ ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಇದು ಅತ್ಯಂತ ದುರಾದೃಷ್ಟಕರವಾದಂಥ ಬೆಳವಣಿಗೆ. ಕರ್ನಾಟಕ ವಿಧಾನ ಮಂಡಲಗಳಿಗೆ ಬಹಳ ದೊಡ್ಡ ಇತಿಹಾಸವಿದೆ. ಇವೊತ್ತು ಸಂಜೆ ಆರು ಗಂಟೆಗೆ ನಮ್ಮ ಹಲವು ಸಂಸದೀಯ ನಡವಳಿಕೆಗಳ ಮೇಲೆ, ತಮ್ಮ ಛಾಪನ್ನು ಬಿಟ್ಟಿರತಕ್ಕಂತ ಮಹಾನುಭಾವರುಗಳ ಪುಸ್ತಕಗಳನ್ನು ನಮ್ಮ ಲೈಬ್ರರಿ ಕಮಿಟಿಯವರು ಹೊರತರುತ್ತಾ ಇದ್ದಾರೆ. ಅದನ್ನು ಬಿಡುಗಡೆ ಮಾಡಲು ಮಾನ್ಯರಾಜ್ಯಪಾಲರು ಬರುತ್ತಾ ಇದ್ದಾರೆ. ನಾವುಗಳು

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಎಲ್ಲರೂ ಕೂಡ ಅದರಲ್ಲಿ ಭಾಗವಹಿಸಬೇಕಾದಂಥ ಆಹ್ವಾನವಿದೆ. ಬಸವಣ್ಣವರು 'ಎನಗಿಂತ ಕಿರಿಯರಿಲ್ಲ' ಎಂದರು. ಆ ಮಾತನ್ನು ಎಲ್ಲರೂ ಒಪ್ಪುತ್ತಾ ಇದ್ದಾರೆ. ಈ ಭಾಗದ ಸದಸ್ಯರು ಮತ್ತು ಆ ಭಾಗದ ಸದಸ್ಯರು ಅದನ್ನೇ ಹೇಳುತ್ತಾರೆ. ಆ ಮಾತಿನಲ್ಲಿ ನಾವು ನಮ್ಮ ನಿಷ್ಠೆಯನ್ನು ವ್ಯಕ್ತಪಡಿಸುತ್ತೇವೆ, ಇಂಥ ಪ್ರಸಂಗಗಳು ಬಂದಾಗ ಆ ಮಾತುಗಳು ನಮಗೆ ದಾರಿದೀಪವಾಗುತ್ತವೆ. ಶತ್ರು ರಾಷ್ಟ್ರ ದೇಶದ್ರೋಹ. ಇವುಗಳೆಲ್ಲವೂ ಕೂಡ ಡಿಕ್ಷನರಿಗಳಲ್ಲಿರತಕ್ಕಂಥ ಶಬ್ದಗಳು. ಅವುಗಳಿಗೆ ನಾವು ಚಲಾವಣೆಯನ್ನು ಕೊಡಬೇಕಾದಂಥ ಅಶ್ಯಕತೆಯಿಲ್ಲ. ಈ XXX ಕಲ್ಪನೆಯು ಹೇಗೆ ಬಂತು ಎಂದು ನನಗೆ ಗೊತ್ತಾಗುತ್ತಾ ಇಲ್ಲ. ಒಂದು ಮಗುವಿಗೆ ಸಹಾಯ ಮಾಡತಕ್ಕಂಥಾದ್ದು. ಅದು ಯಾವುದೇ ದೇಶದಿಂದ ಬಂದಿರಲಿ, ಅದು ಶತ್ರು ರಾಷ್ಟ್ರದಿಂದ ಮಿತ್ರರಾಷ್ಟ್ರದಿಂದ, ತಟಸ್ಥರಾಷ್ಟ್ರದಿಂದ, ಹೀಗೆ ಯಾವುದೇ ರಾಷ್ಟ್ರದಿಂದ ಬಂದಿರಲಿ, ಅಂಥ ಸಂದರ್ಭದಲ್ಲಿ ಮಾನವೀಯತೆಯ ದೃಷ್ಟಿಯಿಂದ ನಾವು ಒಂದು ನಿಲುವನ್ನು ತೆಗೆದುಕೊಳ್ಳುತ್ತೇವೆ. ಆ ಮಾನವೀಯತೆಯ ದೃಷ್ಟಿಯಿಂದಲೇ ನಮ್ಮ ಸಂಸ್ಕೃತಿಯು ನಮಗೆ ಏನನ್ನು ಹೇಳಿಕೊಡುತ್ತದೆ. ಯಾರು ನೋವಿನಲ್ಲಿದ್ದಾರೋ, ಅವರ ರಕ್ಷಣೆಗೆ ನಾವು ಹೋಗಬೇಕೆನ್ನುವಂಥಾದ್ದು ಇದೆ. ಆ ಒಂದು ಉದಾತ್ತವಾದ ಧ್ಯೇಯವನ್ನು ನಾವು ಗಮನದಲ್ಲಿಟ್ಟುಕೊಂಡು, ಆ ಮಗು ಇಲ್ಲಿಗೆ ಬಂತು, ಬಸ್ ಬಂತು, ಮಗು ಬಂತು. ಆಪರೇಶನ್ ಮುಗಿಯಿತು, ಆ ಮಗು ವಾಪಸ್ಸ್ ಹೋಯಿತು, ಆದರೆ ನಮ್ಮ ಸಂಕುಚಿತ ದೃಷ್ಟಿ ಮತ್ತು ನೀತಿಯಿಂದ ಸೃಷ್ಟಿಸಿದಂಥ ಒಂದು ವಿಚಾರ ಮಾತ್ರ ಪ್ರತಿಧ್ವನಿತವಾಗಿದೆ. ಮಾನ್ಯ ಸದಸ್ಯರುಗಳು ಮಾತಿನ ಮೇಲೆ ಹತೋಟಿ ಇಟ್ಟುಕೊಳ್ಳಬೇಕು. ಮೊದಲು ನಾವು ಮಾತಿನ ಮೇಲೆ ಪ್ರಭುತ್ವ ಹೊಂದಿರಬೇಕು. ಅದರ ಬಗ್ಗೆ ನಾನು ಹೇಳುವುದಿಲ್ಲ. ಹತೋಟಿಯನ್ನು ನಾವು ಇಟ್ಟುಕೊಳ್ಳಬೇಕು. ನಮ್ಮ ಮಾತಿನ ಮೇಲೆ, ನಾಲಿಗೆಯ ಮೇಲೆ ನಮಗೆ ನಾವು ಹತೋಟಿಯನ್ನು ಇಟ್ಟುಕೊಂಡರೆ ಈ ಎಲ್ಲಾ ಕಹಿ ಪ್ರಸಂಗಗಳಿಗೆ ಎಡೆಕೊಡುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಮಾನ್ಯ ಸಚಿವರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ, ಹೊಣೆಗಾರಿಕೆಯಿದೆ. ಆ ಮಾತನ್ನು ಈಗಾಗಲೇ ಮಾನ್ಯ ಸಂಸದೀಯ ಸಚಿವರು ಹೇಳಿದ್ದಾರೆ. ಅದು ಸರಕಾರದ ನಿಲುವನ್ನು ಪ್ರತಿಬಿಂಬಿಸುತ್ತದೆ. ಮಾನ್ಯ ಪೌರಾಡಳಿತ ಸಚಿವರು ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅದು ಯಾವುದೋ ಒಂದು ಸನ್ನಿವೇಶ ಹೇಗೆ ಒದಗಿ ಬಂತು, ಅವರು ಕೊಟ್ಟಿರತಕ್ಕಂಥ ಪರ್ ಹ್ಯಾಪ್ಸ್, ಸ್ಟಾಂಟೇನೀಯಸ್ ಆಗಿ, ಅವರು ರೀ-ಆಕ್ಟ್ ಮಾಡಿದಂತೆ ಎಮೋಷನಲ್ ರೀ-ಆಕ್ಷನ್ ಎಂದು ನಾನು ವಿಶ್ಲೇಷಣೆ ಮಾಡುತ್ತೇನೆ. ಮನುಷ್ಯರುಗಳ ಮೇಲೆ ಈ ಎಮೋಷನ್ಸ್ ಹೇಗೆ ಕೆಲಸ ಮಾಡುತ್ತವೆ ಎನ್ನುವಂಥಾದ್ದನ್ನು ನಾವು ಸ್ಪಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ. ಅದನ್ನು ಡಿಫೈನ್ ಮಾಡಲಿಕ್ಕೆ ಬರುವುದಿಲ್ಲ. It is beyond definiton ಒಬ್ಬೊಬ್ಬರ ಮೇಲೆ ಒಂದೊಂದು ರೀತಿಯ ಎಮೋಷನ್ಸ್‌ನ್ನು ಇನ್‌ವೋಕ್ ಮಾಡುತ್ತವೆ. ಆ ಮಗುವಿನ ದೃಷ್ಟಿಯಿಂದ ಅವರು ಅದಕ್ಕೆ ರೀ-ಆಕ್ಟ್ ಮಾಡಿದರು. ಅಥವಾ ಅವರು ಮಾನ್ಯ ತೀರ್ಥಹಳ್ಳಿ ಸದಸ್ಯರು ಹೇಗೆ ಇದಕ್ಕೆ ರೀಆಕ್ಟ್ ಮಾಡಿದರು ಅಂದರೆ, ಅವರ ಊರಿನಲ್ಲಿ ಒಬ್ಬ ಕಷ್ಟದಲ್ಲಿದ್ದಾನೆ. ಆದ್ದರಿಂದ ಇವರು ಅವರ ಕಷ್ಟಕ್ಕೆ ಬರಲಿಲ್ಲವಲ್ಲಾ

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಎಂಬ ಸಂಕಟದಿಂದಾಗಿ ಈ ಮಾತುಗಳನ್ನು ಹೇಳಿದ್ದಾರೆ ಎಂದು ನಾನು ಒಂದು ಲಿಬರಲ್ ಇಂಟರ್ ಪ್ರಿಟೇಶನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ದರಿಂದ ನಾವು ಯಾರೂ ಈ ಸದನಕ್ಕೆ ದೊಡ್ಡವರು ಅಲ್ಲ. ಈ ಸದನದೊಳಗೆ ಇರತಕ್ಕಂಥ ಎಲ್ಲರೂ ಕೂಡ ದೇಶಪ್ರೇಮಿಗಳೇ. ಯಾರೂ ದೇಶದ್ರೋಹಿಗಳು ಅಲ್ಲ ಅನ್ನತಕ್ಕಂಥಾದ್ದು ನಮ್ಮ ಸ್ಪಷ್ಟವಾದಂಥ ನಿಲುವು. ಆದ್ದರಿಂದ ಈ ಹಿನ್ನಲೆಯಲ್ಲಿ ಮಾನ್ಯ ತೀರ್ಥಹಳ್ಳಿ ಸದಸ್ಯರು ಮತ್ತು ಮಾನ್ಯ ಪೌರಾಡಳಿತ ಸಚಿವರು ಅವರು ತಮ್ಮ ತಮ್ಮ ನಿಲುವುಗಳನ್ನು ಸದನಕ್ಕೆ ಸ್ಪಷ್ಟಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಏನು ವಿಚಾರವನ್ನು ಹೇಳಿದ್ದಾರೆ. ಯಾವರೀತಿಯಾಗಿ ನಾವೆಲ್ಲರೂ ಸಂಸದೀಯ ವ್ಯವಹಾರದಲ್ಲಿ ನಮ್ಮ ಜವಾಬ್ದಾರಿ ಮತ್ತು ನಮ್ಮ ಮಾತುಗಳು, ಹೇಗೆ ಮತ್ತು ಯಾವರೀತಿಯಲ್ಲಿರಬೇಕೆಂದು ಉಪದೇಶ ಮತ್ತು ಆದೇಶ ಎರಡನ್ನು ಕೊಟ್ಟಿದ್ದಾರೆ, ಇದಕ್ಕೆ ನಾನು ಒಪ್ಪುತ್ತೇನೆ. ನನ್ನ ಭಾವನೆಗಳನ್ನೂ ಕೂಡ ನಾನು ಒತ್ತಿ ಒತ್ತಿ ಹೇಳಿದ್ದೇನೆ. ಮಾನ್ಯ ಸಗೀರ್‌ರವರೂ ಕೂಡ ಬಿಡಿಸಿ ಸರಿಯಾದ ಸಂದರ್ಭದಲ್ಲಿ ಹೇಳಿದ್ದಾರೆ.

ನಮ್ಮ ಒಂದು ಸರ್ಕಾರದ ಕಾರ್ಯದ ಬಗ್ಗೆ ಅವರು ಯಾವ ರೀತಿ ಯಾವ ಪದವನ್ನು ಉಪಯೋಗಿಸಿದರು ಯಾವ ರೀತಿ ಆ್ಯಡ್ ಮಾಡಿದರು ಅದರಿಂದ ಏನು ಬಂತು ಎಂದು ನಾನೂ ಹೇಳಿದ್ದೇನೆ. ಅವರೂ ಹೇಳಿದ್ದಾರೆ ಅವರು ಆ XXX ಪದ ಉಪಯೋಗಿಸಿರಲಿಲ್ಲ. ಅಂದಿದ್ದರೆ ನಾನು ಎದ್ದು ನಿಲ್ಲುವ ಸಂದರ್ಭ ಬರುತ್ತಿರಲಿಲ್ಲ. ಮಾತನಾಡುವ ಸಂದರ್ಭವೂ ಬರುತ್ತಿರಲಿಲ್ಲ. ನಾನು ಯಾರನ್ನೂ XXX ಅಥವಾ ಮತ್ತೊಂದಾಗಲಿ ಅನ್ನುತ್ತಿರಲಿಲ್ಲ. ಬಹುಶಃ ಅವರು ನಮ್ಮನ್ನು ಏನು ಬೇಕಾದರೂ ಕರೆದಿರಲಿ ಈ ಸಂಸದೀಯ ವ್ಯವಹಾರದಲ್ಲಿ, ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದಲ್ಲಿ ನಾವೆಲ್ಲಾ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾವ್ಯಾರೂ ಕೂಡ ನಮ್ಮ ದೇಶದ ಸ್ವಾಭಿಮಾನವನ್ನು ದೇಶದ ರಕ್ಷಣೆಯನ್ನು ಬಿಟ್ಟು ಕೆಲಸ ಮಾಡಲಿಕ್ಕೆ ಸಿದ್ಧರಿಲ್ಲ. ಅದನ್ನೇ ಪ್ರಮಾಣವಚನ ಸ್ವೀಕಾರ ಮಾಡಿಕೊಂಡು ಇಲ್ಲಿಗೆ ಬಂದಿದ್ದೇವೆ. ಆದ್ದರಿಂದ ಯಾರ ಮನಸ್ಸಿಗೆ ಕೂಡ ನೋಯಿಸುವಂತಹ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ನಾನು ನಮ್ಮ ಸ್ನೇಹಿತರುಗಳಿಗೆ ಈ ಸಂದರ್ಭದಲ್ಲಿ ವಿನಂತಿಸುವುದೇನೆಂದರೆ, ಅವರು ತಮ್ಮ ಮನಸ್ಸಿನಲ್ಲಿ ಆ ಭಾವನೆಯನ್ನು ಇಟ್ಟುಕೊಳ್ಳದೆ ಇರಲಿ. ಈ ದಿಸೆಯಲ್ಲಿ ನಾನು ತುಂಬು ಹೃದಯದಿಂದ ಕ್ಷಮಾಪಣೆ ಕೇಳಲಿಕ್ಕೆ ತಯಾರಿದ್ದೇನೆ. ಒಂದು ವೇಳೆ ಅವರಿಗೇನಾದರೂ ಅನ್ನಿಸಿದ್ದರೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಭಾನಾಯಕರೂ, ಮುಖ್ಯಮಂತ್ರಿಗಳೂ ಈಗಾಗಲೇ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಮಾತನಾಡುವ ಸಂದರ್ಭದಲ್ಲಿ ಸದನದೊಳಗೆ ಅವರಿರಲಿಲ್ಲ. ಅದಕ್ಕಾಗಿಯೇ ನಾನು ಹೇಳಿದೆ ತಮಗೆ,

---

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ನಾನು ಮಾತನಾಡಿರುವುದನ್ನು ರೆಕಾರ್ಡ್ ತರಿಸಿ ಓದಿಸಿಬಿಡಿ, ನಾನು ಯಾವ ಅರ್ಥದಲ್ಲಿ ಹೇಳಿದ್ದೇನೆ ಅನ್ನುವುದನ್ನು ಹೇಳಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನನ್ನು ಹೇಳಿದ್ದಾರೆ ಅದಕ್ಕೆ ನನ್ನ ಸಹಮತ ಇದೆ. ಅವರು ಹಿರಿಯರಿದ್ದಾರೆ, ಅವರ ವಯಸ್ಸಾಗಲೀ ಅವರ ಅನುಭವವಾಗಲೀ ನನಗೆ ಇಲ್ಲ. ಆದರೆ ಈ ಸದನದಲ್ಲಿ ಸುಮಾರು ಏಳೆಂಟು ವರ್ಷಗಳಿಂದ ಕುಳಿತು ಇಲ್ಲಿನ ನಡವಳಿಕೆಗಳಲ್ಲಿ ಭಾಗವಹಿಸಿದ್ದೇನೆ. ಅನೇಕ ಹಿರಿಯರು ಮಾತನಾಡಿರುವುದನ್ನು, ಅನೇಕ ಹಿರಿಯರ ನಡವಳಿಕೆಗಳನ್ನು ನೋಡಿದ್ದೇನೆ. ನಾನು ಮಾತನಾಡಿರತಕ್ಕಂತಹ ಹಿನ್ನೆಲೆ ಮತ್ತು ರಾಜ್ಯ ಸರ್ಕಾರ ಆ ಮಗುವಿನ ಬಗ್ಗೆ ತೆಗೆದುಕೊಂಡ ಕಾಳಜಿ ನಮ್ಮ ಒಬ್ಬ ಕ್ಯಾಬಿನೆಟ್ ಸಚಿವರೇ ಹೋಗಿ ವಿಶ್ ಮಾಡಿ ಬಂದರು, ಇದನ್ನು ಗೌರವಿಸಿ ನಾನು ಮಾತನಾಡಿದ್ದೇನೆಯೇ ಹೊರತು ಅಗೌರವದಿಂದ ಅಲ್ಲ. ಅನೇಕ ಸಂದರ್ಭಗಳಲ್ಲಿ ಮಾತನಾಡುವಾಗ ಸರ್ಕಾರವನ್ನು ಚುಚ್ಚಿದ್ದುಂಟು. ಆದರೆ ಒಂದು ಮಟ್ಟದಲ್ಲಿ ಚುಚ್ಚಿದ್ದೇವೆ, ಒಂದು ಕಾರ್ಯಕ್ರಮದ ಆಧಾರದಲ್ಲಿ ಚುಚ್ಚಿದ್ದೇವೆ. ಯಾವುದೋ ಒಂದು ಮಗುವಿಗೆ ಚಿಕಿತ್ಸೆ ಕೊಡಿಸಿದಾಗಲೂ ಕೂಡ ನಮ್ಮ ಸರ್ಕಾರ ತಪ್ಪು ಮಾಡಿದೆ ಎಂಬ ಹೃದಯಹೀನತೆ ನನ್ನ ಹತ್ತಿರ ಇಲ್ಲ. ಖಂಡಿತವಾಗಿ ಗೌರವಿಸಿದ್ದೇನೆ. ನಮ್ಮ ಸರ್ಕಾರ ನಡೆದುಕೊಂಡ ರೀತಿ, ನಮ್ಮ ಮಾಧ್ಯಮಗಳು ಅದಕ್ಕೆ ಕೊಟ್ಟ ಪ್ರಚಾರ, ಬೇರೆ ಬೇರೆ ರಾಷ್ಟ್ರಗಳ ಅನೇಕ ಮಕ್ಕಳು ಕೂಡ ಇಲ್ಲಿಗೆ ಒಂದು ಪ್ರತಿನಿತ್ಯ ನೂರಾರು operations ಆಗುತ್ತಾ ಇವೆ, ಬೆಂಗಳೂರಿನಲ್ಲಿ ಅನೇಕ ಒಳ್ಳೆಯ ಆಸ್ಪತ್ರೆಗಳಿವೆ, ಆದರೂ ಅವ್ಯಾವುದಕ್ಕೂ ಸಿಗದ ಪ್ರಚಾರ ಈ ಮಗುವಿಗೆ ಸಿಕ್ಕಿದಂತಹ, ಹಿನ್ನೆಲೆಯೇನು? ನಮ್ಮ ಆ ರಾಷ್ಟ್ರಗಳ ಸಂಬಂಧದ ಹಿನ್ನೆಲೆಯಲ್ಲಿ ಆ ಮಗು ಇಲ್ಲಿಗೆ ಬಂದಾಗ ಸಿಕ್ಕಿದೆ. ಅದರಲ್ಲಿ ಅತ್ಯಂತ ಹೃದಯವಂತಿಕೆಯನ್ನು ತೋರ್ಪಡಿಸಿದ್ದೀರಿ. ನಮ್ಮ ಕರ್ನಾಟಕದ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದೀರಿ ಎಂದು ಮಾತನಾಡಿಕೊಂಡೇ ನಾನು ಹೇಳಿದ್ದೇನೆ. ನಮ್ಮ ಬಾಂಧವ್ಯ ಸರಿಯಿರದ XXX ಒಂದು ಮಗು ಬಂದಾಗ ಏನು ತೋರಿಸಿದ್ದೀರಿ ಅದೇ ಹೃದಯವಂತಿಕೆಯನ್ನು ನನ್ನ ಕ್ಷೇತ್ರದ ವ್ಯಕ್ತಿಯ ಬಗ್ಗೆ ಈಗೇನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅವನಿಗೂ ತೋರಿಸುವಂತಹ ವ್ಯವಸ್ಥೆ ಆಗಬೇಕು ಎಂದು. ಮಾನ್ಯ ಸಂಸದೀಯ ಸಚಿವರು ಈಗಾಗಲೇ ಹೇಳಿದರು, ನೀವು ಯಾರಿಗಾದರೂ ಹೇಳಿದ್ದರೂ ಆಗುತ್ತಿತ್ತೇನೋ ಎಂದು. ನಾನು ಈಗಲೂ ಕೂಡ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಅವನಿಗೇನಾದರೂ ಒಂದಷ್ಟು ನೆರವನ್ನು ಕೊಡಿ ಎಂದು. ಹಾಗೇನೇ XXX XXX ಎಂದು ಪದಪ್ರಯೋಗ ಮಾಡಿದ್ದಕ್ಕಾಗಿ ನನ್ನ ಆತ್ಮೀಯರಾದ ಶ್ರೀ ಶಿವಕುಮಾರ್ ಅವರಿಗೇನಾದರೂ ಬೇಸರ ಆಗಿದ್ದರೆ, ಮನಸ್ಸಿಗೆ ನೋವಾಗಿದ್ದರೆ, ಅಂತಹ ಅನಿಸಿಕೆ ಅವರಿಗೆ ಬಂದಿದ್ದರೆ ನಾನೂ ಕೂಡ ವಿಷಾದಿಸುತ್ತೇನೆ. ಅದನ್ನು ಮನಸಿನಲ್ಲಿಟ್ಟುಕೊಳ್ಳಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಭಾನಾಯಕರು ಒಂದು ಮಾತು ಹೇಳಿದರು. ಮಾತಿನ ಮೇಲೆ ಹತೋಟಿ ಇರಬೇಕು ಎಂದು, ನೋಡಿ, ಎಷ್ಟು ಚೆನ್ನಾಗಿ ಇಬ್ಬರೂ ಮಾತನಾಡಿದರು ಹತೋಟಿ ಇಟ್ಟುಕೊಂಡಾಗ.. ಹತೋಟಿ ತಪ್ಪಿದಾಗ ಇವೆಲ್ಲ ಆದದ್ದು.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ನನ್ನ ಶಾಸಕ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ದಯವಿಟ್ಟು ಅವರು ಬಂದು ಆಸೀನರಾಗಲಿ ಈ ಸದನದ ಕಲಾಪಗಳು ಸರಿಯಾಗಿ ನಡೆಯಬೇಕೆಂಬುದು ನಮ್ಮದೂ ಸದುದ್ದೇಶ. ಆದರೆ ಭಾವೋದ್ವೇಗದಲ್ಲಿ ಇಂತಹ ಶಬ್ದಗಳಿಗೆ ಅರ್ಥ ಕಲ್ಪಿಸುವಲ್ಲಿ ಹೆಚ್ಚುಕಡಿಮೆಯಾದಾಗ ಈ ರೀತಿಯಾದದ್ದು, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸ್ಪಂದನ ಮಾಡುವ ಕೆಲಸ ಮಾಡಿ ಮುಂದೆ ಇದೇ ರೀತಿ ಸಹಕಾರ ಇರಲಿ ಎಂದು ಹೇಳುತ್ತೇನೆ.

(ಬಿಜೆಪಿಯ ಮಾನ್ಯ ಸದಸ್ಯರು ಧರಣಿಯನ್ನು ಅಂತ್ಯಗೊಳಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾದರು.)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ತೋರಿದಂತಹ ಜಾಣ್ಮೆ ನಿಜವಾಗಿ ಮೆಚ್ಚತಕ್ಕಂಥಾದ್ದು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ತೋರಿಸಿದ ಅನುಭವ ಅಪಾರವಾದುದು. ಮೂರು ಗಂಟೆಗಳ ಕಾಲ ಅವರಿಬ್ಬರೂ ಈ ಸಭೆಯನ್ನೇ ನಡೆಯದಂತೆ ಮಾಡಿದ್ದನ್ನು ಇವತ್ತು ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳು interfere ಆಗಿ ಅವರಿಬ್ಬರೂ ಕೂಡ ನಾವಿಬ್ಬರೂ ಸ್ನೇಹಿತರು ಎಂದು ಹೇಳುವ ಮಟ್ಟಕ್ಕೆ ತರಿಸಿದ್ದರಿಂದ ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ.

ಶ್ರೀ ಸಿ. ಚನ್ನಿಗಪ್ಪ : ಈ ಸದನದ ಗೌರವ ಕಾಪಾಡುವ ವಿಚಾರದಲ್ಲಿ ತಮ್ಮ ದಿಟ್ಟ ಸೂಚನೆಯನ್ನು ಏನು ಕೊಟ್ಟಿದ್ದಾರೆ ಅದಕ್ಕೆ ನಾವೂ ಸಹ ಅಭಾರಿಯಾಗಿದ್ದೇವೆ.

ಉಪಾಧ್ಯಕ್ಷರು : ನೀವೆಲ್ಲಾ ಸಮಾಧಾನದಿಂದ ನಮ್ಮ ಈ ಕೆಲಸವನ್ನು ಸಲೀಸಾಗಿ ಮಾಡಿಕೊಟ್ಟಿದ್ದಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ನಿಮಗೂ ಕೂಡ ನಾನು ಅಭಿನಂದಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅಂದರೆ, ಪ್ರಚೋದನೆ ಭಾವೋದ್ವೇಗಗಳ ಮಧ್ಯೆ ಇಲ್ಲಿಯವರೆಗೆ ಸಮಯಹರಣವಾಗಿದೆ, ಹಿಡಿತದಿಂದ ಮಾತನಾಡಿರಿ ಎಂದು ಹೇಳಿದರು. ಉದ್ವೇಗವನ್ನು ಶಮನ ಮಾಡಿದರು. ಪ್ರೀತಿ ವಿಶ್ವಾಸದ ಮಾತುಗಳಿಂದ ಇಲ್ಲಿ ಒಳ್ಳೆಯ ವಾತಾವರಣ ನಿರ್ಮಾಣವಾಗಿದೆ, ಪ್ರಚೋದನೆ ಬಿಟ್ಟು ಸ್ನೇಹ ಬಂದಿದೆ. ಇದೇ ರೀತಿ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಸ್ನೇಹಮಯವಾದ ವಾತಾವರಣ ಏರ್ಪಡಿಸಲಿಕ್ಕೆ ನಾಯಕರ ಒಂದು ಮಾರ್ಗದರ್ಶನ ಸಿಗಲಿ ಎಂದು ಹಾರೈಸುತ್ತೇನೆ.

ಉಪಾಧ್ಯಕ್ಷರು : ಇದು ಹೀಗೆಯೇ ಮುಂದುವರಿಯಲಿ

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.